# ಶಾಲಾ ಶಿಕ್ಷಣ ಇಲಾಖೆ
## ಕೇಂದ್ರೀಕೃತ ದಾಖಲಾತಿ ಘಟಕ, ಶಾಲಾ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಕೆ.ಜಿ. ರಸ್ತೆ, ಬೆಂಗಳೂರು-09

==========================================================

## ಪದೇ ಪದೇ ಕೇಳಲಾಗುವ ಪ್ರಶ್ನೆಗಳಿಗೆ ಉತ್ತರಗಳು (FAQ)

2026-27ನೇ ಸಾಲಿನಲ್ಲಿ, ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕ –ಸಾಮಾನ್ಯ (1 ರಿಂದ 5 ನೇತರಗತಿ), ಸರ್ಕಾರಿ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-II (1 ರಿಂದ 8ನೇತರಗತಿ) ವೃಂದದ ಹುದ್ದೆಗಳಿಗೆ ಹಾಗೂ ಪದವೀಧರ ಪ್ರಾಥಮಿಕ ಶಿಕ್ಷಕ (6 ರಿಂದ 8 ನೇ ತರಗತಿ) ವೃಂದದ ಹುದ್ದೆಗಳಿಗೆ ಹಾಗೂ ಗಣಕ ವಿಜ್ಞಾನ ಶಿಕ್ಷಕರ (1 ರಿಂದ 8ನೇ ತರಗತಿ) ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ರಾಜ್ಯದ ಆಯಾ ಜಿಲ್ಲಾವಾರು ಅಧಿಸೂಚನೆಗಳನ್ನು ಹೊರಡಿಸಲಾಗಿದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅದೇ ರೀತಿಯಾಗಿ ಶಿಕ್ಷಣ ಇಲಾಖೆಯ ಆಯಾ ವಿಭಾಗೀಯ ವ್ಯಾಪ್ತಿಯ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಪ್ರೌಢಶಾಲಾ ಸಹ ಶಿಕ್ಷಕರು (ಕನ್ನಡ ಭಾಷೆ, ಆಂಗ್ಲ ಭಾಷೆ, ಕಲಾ (ಕನ್ನಡ/ಇಂಗ್ಲೀಷ್) ಜೀವ ವಿಜ್ಞಾನ (ಕನ್ನಡ /ಇಂಗ್ಲೀಷ್) ಹಾಗೂ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳನ್ನು ವಿಭಾಗ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ರಾಜ್ಯದ ಆಯಾ ವಿಭಾಗವಾರು ಅಧಿಸೂಚನೆಗಳನ್ನು ಹೊರಡಿಸಲಾಗಿದ್ದು, ಅರ್ಹರಾಗಿರುವ ಅಭ್ಯರ್ಥಿಗಳಿಂದ ನಿಗದಿಪಡಿಸಿರುವ ಆನ್‌ಲೈನ್ ಮೂಲಕ ಅರ್ಜಿಗಳನ್ನು ಕರೆಯಲಾಗಿದೆ.

ನೇಮಕಾತಿ ಅಧಿಸೂಚನೆಯಲ್ಲಿ ಎಲ್ಲಾ ಮಾಹಿತಿಯನ್ನು ವಿವರವಾಗಿ ನೀಡಿದ್ದು, ಅಧಿಸೂಚನೆಯಲ್ಲಿ ನೀಡಿರುವ ಅಂಶಗಳೇ ಅಂತಿಮವಾಗಿದ್ದು, ಅಭ್ಯರ್ಥಿಗಳು ಅಧಿಸೂಚನೆಯನ್ನು ಕೂಲಂಕುಷವಾಗಿ ಓದಿ ಅರ್ಥೈಸಿಕೊಳ್ಳುವುದು. ಅಧಿಸೂಚನೆಯಲ್ಲಿನ ಅಂಶಗಳನ್ನು ಸರಳೀಕರಣ ಮಾಡಿ ಅಭ್ಯರ್ಥಿಗಳಿಗೆ ಉದ್ಭವಿಸಿರುವ ಅಥವಾ ಉದ್ಭವಿಸಬಹುದಾದ ಪ್ರಶ್ನೆಗಳಿಗೆ ಉತ್ತರ ನೀಡುವ ಒಂದು ಪ್ರಯತ್ನದ ಭಾಗವಾಗಿ, **ಪದೇ ಪದೇ ಕೇಳಲಾಗಿರುವ ಪ್ರಶ್ನೆಗಳಿಗೆ ಈ ಕೆಳಕಂಡಂತೆ ಉತ್ತರಿಸಲಾಗಿದೆ.**

**ವಿಶೇಷ ಸೂಚನೆ:** ಸದರಿ ಪ್ರಶ್ನೋತ್ತರಗಳು, ಕಾಲಕಾಲಕ್ಕೆ ಸರ್ಕಾರದಿಂದ ಹೊರಡಿಸಲಾಗುವ ಸುತ್ತೋಲೆ, ಆದೇಶ, ಅಧಿಸೂಚನೆಗೆ ಒಳಪಟ್ಟಿರುತ್ತದೆ.

| ಕ್ರ.ಸ | ಪ್ರಶ್ನೆ | ಉತ್ತರ/ಮಾಹಿತಿ |
|---|---|---|
| **ಆನ್‌ಲೈನ್ ಅರ್ಜಿ ಗೆ ಸಂಬಂಧಿಸಿದಂತೆ** | | |
| 01 | Online ಅರ್ಜಿ ಸಲ್ಲಿಸಲು ಪ್ರಾರಂಭದ ಮತ್ತು ಕೊನೆಯ ದಿನಾಂಕ: | Online ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ:18/08/2026<br>Online ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ:15/09/2026 |
| 02 | ಅಭ್ಯರ್ಥಿಗಳು ಅರ್ಜಿಯೊಂದಿಗೆ ಯಾವ ಯಾವ ದಾಖಲೆಗಳನ್ನು Upload ಮಾಡಬೇಕು? | ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ನಾನ್‌ಕ್ರಿಮೀ ಲೇಯರ್, 371ಜೆ ಮೀಸಲಾತಿ ಪ್ರಮಾಣ ಪತ್ರ ಹೊರತುಪಡಿಸಿ, ಉಳಿದಂತೆ ಸಮತಲ ಮೀಸಲಾತಿಗೆ ಸಂಬಂಧಿಸಿದಂತೆ ಎಲ್ಲಾ ಪ್ರಮಾಣ ಪತ್ರಗಳನ್ನು Upload ಮಾಡಬೇಕಿರುತ್ತದೆ. |
| **ಜಾತಿ ಮತ್ತು ಆದಾಯ ಪ್ರಮಾಣ ಪತ್ರಕ್ಕೆ ಸಂಬಂಧಿಸಿದಂತೆ** | | |
| 03 | ನನ್ನ ಬಳಿ ಇರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರದಲ್ಲಿ **ವ್ಯಾಸಂಗಕ್ಕಾಗಿ** ಎಂದು ನಮೂದಿಸಲಾಗಿದೆ. ಸದರಿ ಪ್ರಮಾಣ ಪತ್ರವನ್ನು ನೇಮಕಾತಿಗೆ ಸಲ್ಲಿಸಬಹುದೇ? | ಜಾತಿ ಮತ್ತು ಆದಾಯ ಪ್ರಮಾಣ ಪತ್ರದಲ್ಲಿ **ವ್ಯಾಸಂಗಕ್ಕಾಗಿ** ಎಂದು ನಮೂದಿಸಿದ್ದಲ್ಲಿ, ಪರಿಗಣಿಸುವುದಿಲ್ಲ.<br>**ವ್ಯಾಸಂಗಕ್ಕಾಗಿ** ಅಥವಾ **ಉದ್ಯೋಗಕ್ಕಾಗಿ** ಎಂದು ನಮೂದಿಸದೇ ಇರುವ ಪ್ರಮಾಣ ಪತ್ರ ಸಲ್ಲಿಸಬಹುದು ಅಥವಾ **ಉದ್ಯೋಗಕ್ಕಾಗಿ** ಎಂದು ನಮೂದಿಸಿರುವ ಪ್ರಮಾಣ ಪತ್ರ ಸಲ್ಲಿಸಬಹುದು. ಅಭ್ಯರ್ಥಿಯು ನೇಮಕಾತಿ ಹೊಂದಿದ್ದಲ್ಲಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರದ ಸಿಂಧುತ್ವ ಪ್ರಮಾಣ ಪತ್ರ ಸಲ್ಲಿಸುವುದು ಕಡ್ಡಾಯ. |
| 04 | ನೇಮಕಾತಿಗೆ ಜಾತಿ ಮತ್ತು ಆದಾಯದ ಮೀಸಲಾತಿ ಕೋರಿ, ಮುಖ್ಯ ಆಯ್ಕೆಪಟ್ಟಿಯಲ್ಲಿ **ಸಾಮಾನ್ಯ ವರ್ಗ ದಲ್ಲಿ (GM)** ನಲ್ಲಿಆಯ್ಕೆಯಾದರೂ ಸಿಂಧುತ್ವ ಸಲ್ಲಿಸಬೇಕೆ? | ನೇಮಕಾತಿಗೆ ಜಾತಿ ಮತ್ತು ಆದಾಯದ ಮೀಸಲಾತಿ ಕೋರಿ, ಮುಖ್ಯ ಆಯ್ಕೆಪಟ್ಟಿಯಲ್ಲಿ **ಸಾಮಾನ್ಯ ವರ್ಗದಲ್ಲಿ (GM)** ನಲ್ಲಿಆಯ್ಕೆಯಾದರೂ ಅಥವಾ ಪ್ರವರ್ಗದ ಮೀಸಲಾತಿಯಡಿ ಆಯ್ಕೆಯಾದರೂ ಸಿಂಧುತ್ವ ಪ್ರಮಾಣ ಪತ್ರ ಕಡ್ಡಾಯವಾಗಿ ಸಲ್ಲಿಸಬೇಕಿರುತ್ತದೆ. ಜಾತಿ ಮತ್ತು ಆದಾಯ ಮೀಸಲಾತಿ ಪ್ರಮಾಣ ಪತ್ರದ ಸಿಂಧುತ್ವ ರದ್ದಾದಲ್ಲಿ ಉತ್ತಮ ಮೆರಿಟ್ ಇದ್ದರೂ ಸಹ ನೇಮಕಾತಿ ರದ್ದಾಗುತ್ತದೆ. |
| 05 | ನಾನು ಪರಿಶಿಷ್ಟ .ಜಾತಿಯ ಅಭ್ಯರ್ಥಿಯಾಗಿದ್ದು, ನಿಗದಿತ ನಮೂನೆ- **ಡಿ** ಯಲ್ಲಿ **ಪ್ರವರ್ಗ-ಎ, ಪ್ರವರ್ಗ-ಬಿ, ಪ್ರವರ್ಗ-ಸಿ** ಎಂದು ನಮೂದಿಸದ ಜಾತಿ ಪ್ರಮಾಣ ಪತ್ರವನ್ನು ಹೊಂದಿದ್ದು, ಸದರಿ ಪ್ರಮಾಣ ಪತ್ರವನ್ನೇ ಸಲ್ಲಿಸಬಹುದೆ? ಅಥವಾ | ಪರಿಶಿಷ್ಟ ಜಾತಿಗೆ ಸೇರಿದ ಅಭ್ಯರ್ಥಿಗಳು ನಮೂನೆ '**ಡಿ**' ಯಲ್ಲಿ (ಪ್ರವರ್ಗ-ಎ, ಪ್ರವರ್ಗ-ಬಿ, ಪ್ರವರ್ಗ-ಸಿ ಎಂಬುದಾಗಿ ನಮೂದಿಸಿದ ಜಾತಿ ಪ್ರಮಾನ ಪತ್ರವನ್ನು ಪಡೆದಿರುವುದು ಕಡ್ಡಾಯವಾಗಿರುತ್ತದೆ. |

| | | |
|---|---|---|
| | ಪ್ರವರ್ಗ-ಎ, ಪ್ರವರ್ಗ-ಬಿ, ಪ್ರವರ್ಗ-ಸಿ ಎಂದು ನಮೂದಿಸಿರುವ ಪ್ರಮಾಣ ಪತ್ರ ಸಲ್ಲಿಸಬೇಕೆ? | |
| 06 | ನನಗೆ ವ್ಯಾಸಂಗದ ಉದ್ದೇಶಕ್ಕಾಗಿ 2A, ಪ್ರವರ್ಗದಡಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ನೀಡಿರುತ್ತಾರೆ. ಆದರೆ ಉದ್ಯೋಗಕ್ಕಾಗಿ 3A ಪ್ರವರ್ಗದಡಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ನೀಡಲಾಗಿರುತ್ತದೆ. ನಾನು ಯಾವುದನ್ನು ಸಲ್ಲಿಸಬಹುದೇ? | ಕೆಲವು ಜಾತಿಗಳಿಗೆ ವ್ಯಾಸಂಗದ ಉದ್ದೇಶಕ್ಕಾಗಿ 2A, ಪ್ರವರ್ಗದಡಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ನೀಡಲಾಗಿರುತ್ತದೆ. ಆದರೆಸಕ್ಷಮ ಪ್ರಾಧಿಕಾರದಿಂದ ಉದ್ಯೋಗಕ್ಕಾಗಿ ನೀಡಿರುವ 3A ಪ್ರವರ್ಗದಡಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನೇ ಸಲ್ಲಿಸುವುದು. |
| | **ಕಲ್ಯಾಣ ಕರ್ನಾಟಕ ವ್ಯಾಪ್ತಿಯ 371ಜೆ ಮೀಸಲಾತಿಗೆ ಸಂಬಂಧಿಸಿದಂತೆ** | |
| 07 | ನಾನು ಕಲ್ಯಾಣ ಕರ್ನಾಟಕ ವ್ಯಾಪ್ತಿಯ ನಿವಾಸಿಯಾಗಿದ್ದು, ಸಕ್ಷಮ ಪ್ರಾಧಿಕಾರವು ನೀಡಿರುವ 371ಜೆ ಪ್ರಮಾಣ ಪತ್ರವನ್ನು ಹೊಂದಿದ್ದು, ಆದರೆ RD ನಂಬರ್ ಇರುವುದಿಲ್ಲ. ಸದರಿ ಪ್ರಮಾಣ ಪತ್ರವನ್ನು ನೇಮಕಾತಿಗೆ ಸಲ್ಲಿಸಬಹುದೇ? | ಸಕ್ಷಮ ಪ್ರಾಧಿಕಾರದಿಂದ ನೀಡಿರುವ ಹಾಗೂ RD ನಂಬರ್ ಹೊಂದಿರುವ 371ಜೆ ಮೀಸಲಾತಿ ಪ್ರಮಾಣ ಪತ್ರವನ್ನು ಸಲ್ಲಿಸುವುದು.<br>ಕಡ್ಡಾಯವಾಗಿರುತ್ತದೆ. |
| 08 | HK ಸರ್ಟಿಫಿಕೇಟ್ ಇದೆ. ಆದರೆ ನಾನು ವಿವಾಹವಾಗಿ Non-HK ಜಿಲ್ಲೆಯ ನಿವಾಸಿಯಾಗಿರುತ್ತೇನೆ. ನಾನು 371ಜೆ ಮೀಸಲಾತಿಯಡಿ ಅರ್ಜಿ ಸಲ್ಲಿಸಬಹುದೆ? | ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ (RD ನಂಬರ್ ಹೊಂದಿರುವ) 371ಜೆ ಮೀಸಲಾತಿ ಪ್ರಮಾಣ ಪತ್ರವನ್ನು ಸಲ್ಲಿಸಿ, 371ಜೆ ಮೀಸಲಾತಿ ಅಡಿಯಲ್ಲಿ ಅರ್ಜಿ ಸಲ್ಲಿಸಬಹುದು. |
| 09 | ನಾನು 371ಜೆ ಮೀಸಲಾತಿಯ ಅಭ್ಯರ್ಥಿಯಾಗಿದ್ದು, ನಾನು ಕಲ್ಯಾಣ ಕರ್ನಾಟಕೇತರ ಜಿಲ್ಲೆಗಳಲ್ಲಿ ಅರ್ಜಿ ಸಲ್ಲಿಸಬಹುದೇ? | ಅರ್ಜಿ ಸಲ್ಲಿಸಬಹುದು. |
| 10 | ನಾನು 371ಜೆ ಮೀಸಲಾತಿಯ ಅಭ್ಯರ್ಥಿಯಾಗಿದ್ದು, ನಾನು ಕಲ್ಯಾಣ ಕರ್ನಾಟಕ ಜಿಲ್ಲೆಗಳಲ್ಲಿ ಶೇ.20ರಷ್ಟು ಹುದ್ದೆಗಳಿಗೂ ಅರ್ಜಿ ಸಲ್ಲಿಸಬಹುದೇ? | ನಿಗದಿತ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಬಹುದು. |
| 11 | ನಾನು Non-KK ಅಭ್ಯರ್ಥಿಯಾಗಿದ್ದು, ಕಲ್ಯಾಣ ಕರ್ನಾಟಕದ ಮಿಕ್ಕುಳಿದ ವೃಂದದ ಶೇ.20 ಹುದ್ದೆಗಳಿಗೆ ಅರ್ಜಿ ಸಲ್ಲಿಸಬಹುದೇ? | ಹೌದು, ಕಲ್ಯಾಣ ಕರ್ನಾಟಕದ ಪ್ರದೇಶ ವ್ಯಾಪ್ತಿಯಲ್ಲಿನ ಶೇ.20 ರಷ್ಟು ಮಿಕ್ಕುಳಿದ ವೃಂದದ (RPC) ಹುದ್ದೆಗಳಿಗೆ, GBA ವ್ಯಾಪ್ತಿಯ ಬೆಂಗಳೂರು ಕೇಂದ್ರ ಜಿಲ್ಲೆ ಮತ್ತು ಬೆಂಗಳೂರು ಉತ್ತರ ಜಿಲ್ಲೆ ಇಲ್ಲಿನ ಶೇ.92 ರಷ್ಟು ಹುದ್ದೆಗಳಿಗೆ ಹಾಗೂ (GBA ವ್ಯಾಪ್ತಿಯ 02 ಜಿಲ್ಲೆಗಳು ಹಾಗೂ ಕಲ್ಯಾಣ ಕರ್ನಾಟಕ ವ್ಯಾಪ್ತಿಯ 07 ಜಿಲ್ಲೆಗಳನ್ನು ಹೊರತುಪಡಿಸಿದ) ರಾಜ್ಯದ ಉಳಿದ 26 ಜಿಲ್ಲೆಗಳಲ್ಲಿ ಶೇ.100ರಷ್ಟು ಹುದ್ದೆಗಳಿಗೆ ರಾಜ್ಯಾದ್ಯಂತ ಏಕಕಾಲದಲ್ಲಿ ಪರೀಕ್ಷೆ ನಡೆಯಲಿದೆ. ಈ ಹುದ್ದೆಗಳಿಗೆ ರಾಜ್ಯದ ಯಾವ ಜಿಲ್ಲೆಯ ಅಭ್ಯರ್ಥಿಗಳಾದರೂ ಅರ್ಜಿ ಸಲ್ಲಿಸಬಹುದು. |
| 12 | ನಾನು 371ಜೆ ಮೀಸಲಾತಿಯ ಅಭ್ಯರ್ಥಿಯಾಗಿದ್ದು, ನಾನು GBA ವ್ಯಾಪ್ತಿಯ ಬೆಂಗಳೂರು ಕೇಂದ್ರ ಜಿಲ್ಲೆ ಮತ್ತು ಬೆಂಗಳೂರು ಉತ್ತರ ಜಿಲ್ಲೆಗಳಲ್ಲಿ ಶೇ.8ರಷ್ಟು ಹುದ್ದೆಗಳಿಗೂ ಅರ್ಜಿ ಸಲ್ಲಿಸಬಹುದೇ? | ನಿಗದಿತ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಬಹುದು |
| 13 | ನಾನು 371ಜೆ ಮೀಸಲಾತಿ ಹೊಂದಿದ್ದು, PSTR, GPTR ಮತ್ತು HSTR ಹುದ್ದೆಗೆ Non-KK ಮತ್ತು KK ಅರ್ಜಿ ಸಲ್ಲಿಸಬಹುದಾ? | ಅಭ್ಯರ್ಥಿಯು 371ಜೆ ಮೀಸಲಾತಿ ಪ್ರಮಾಣ ಪತ್ರ ಹೊಂದಿದ್ದಲ್ಲಿ KK ಮತ್ತು Non-KK ಹುದ್ದೆ ಎರಡಕ್ಕೂ ಅರ್ಜಿ ಸಲ್ಲಿಸಬಹುದಾಗಿದೆ. |
| 14 | ನಾನು 371ಜೆ ಮೀಸಲಾತಿ ಹೊಂದಿದ್ದು, PSTR, ಮತ್ತು GPTR ಹುದ್ದೆಗೆ ಕಲ್ಬುರ್ಗಿ ಜಿಲ್ಲೆಯಲ್ಲಿ KK ಮತ್ತು Non-KK ಹುದ್ದೆಗಳಿಗೆ ಅರ್ಜಿ ಸಲ್ಲಿಸಬಹುದಾ? | ಸಲ್ಲಿಸಬಹುದು. |
| 15 | 371ಜೆ ಮೀಸಲಾತಿಯ ಪ್ರಮಾಣ ಪತ್ರದಲ್ಲಿ **ವಿದ್ಯಾಭ್ಯಾಸ ಮತ್ತು ಸರ್ಕಾರಿ ಸೌಲಭ್ಯ** ಎಂದಿದೆ, ಸದರಿ ಪ್ರಮಾಣ ಪತ್ರವನ್ನು 371ಜೆ ಮೀಸಲಾತಿಗೆ ಪರಿಗಣಿಸುವಿರಾ? | 371ಜೆ ಮೀಸಲಾತಿಯ ಪ್ರಮಾಣ ಪತ್ರದಲ್ಲಿ **ವಿದ್ಯಾಭ್ಯಾಸ ಮತ್ತು ಸರ್ಕಾರಿ ಸೌಲಭ್ಯ** ಎಂದಿರುವುದರಿಂದ ಪರಿಗಣಿಸಲಾಗುವುದು. |
| | **ಗ್ರಾಮೀಣ ಮೀಸಲಾತಿ ಕುರಿತು** | |
| 16 | ನಾನು ಸಾಮಾನ್ಯ ಅಭ್ಯರ್ಥಿಯಾಗಿದ್ದು (GM) Creamy layer ವ್ಯಾಪ್ತಿಗೆ (ಕುಟುಂಬದ | ಗ್ರಾಮೀಣ ಮೀಸಲಾತಿಗೆ ಕೆನೆ ಪದರ ನೀತಿ (Creamy layer Policy ಅನ್ವಯಿಸುವುದರಿಂದ **ಗ್ರಾಮೀಣ ಮೀಸಲಾತಿ** ಕ್ಲೇಮು ಮಾಡಲು |

| | | |
|---|---|---|
| | ವಾರ್ಷಿಕ ಆದಾಯ ರೂ.8.00 ಲಕ್ಷಕ್ಕೂ ಹೆಚ್ಚಿದೆ) ಒಳಪಡುತ್ತೇನೆ. ನಾನು **ಗ್ರಾಮೀಣ ಮೀಸಲಾತಿ** ಕೋರಬಹುದೇ? | ಬರುವುದಿಲ್ಲ. |
| 17 | ನಾನು ಸಾಮಾನ್ಯ ಅಭ್ಯರ್ಥಿಯಾಗಿದ್ದು (GM) Creamy layer ವ್ಯಾಪ್ತಿಗೆ (ಕುಟುಂಬದ ವಾರ್ಷಿಕ ಆದಾಯ ರೂ.8.00 ಲಕ್ಷಕ್ಕೂ ಕಡಿಮೆ ಇದೆ.) ಒಳಪಡುತ್ತೇನೆ. ನಾನು **ಗ್ರಾಮೀಣ ಮೀಸಲಾತಿ** ಕೋರಬಹುದೇ? | ಸಾಮಾನ್ಯ ವರ್ಗಕ್ಕೆ ಸೇರಿದ ಅಭ್ಯರ್ಥಿಯು ಅವರ ಕುಟುಂಬದ ಆದಾಯ ರೂ.8.00 ಲಕ್ಷಕ್ಕೂ ಕಡಿಮೆ ಇದ್ದಲ್ಲಿ, ಮೇಲುಸ್ಥರಕ್ಕೆ ಸೇರಿಲ್ಲದ ಬಗ್ಗೆ [Non-creamy layer certificate] **ನಮೂನೆ-1ರಲ್ಲಿ** RD ನಂಬರ್ ಹೊಂದಿರುವ ಪ್ರಮಾಣ ಪತ್ರವನ್ನು ತಹಶೀಲ್ದಾರರಿಂದ ಪಡೆದು ಸಲ್ಲಿಸಬೇಕು. |
| 18 | ನಾನು ಹಿಂದುಳಿದ ವರ್ಗಳಿಗೆ ಸೇರಿದ (2A, 2B, 3A, ಮತ್ತು 3B) ಅಭ್ಯರ್ಥಿಯಾಗಿದ್ದು, ಕುಟುಂಬದ ವಾರ್ಷಿಕ ಆದಾಯ ರೂ. ರೂ.8.00 ಲಕ್ಷಕ್ಕೂ ಹೆಚ್ಚಿದೆ, ನಾನು **ಗ್ರಾಮೀಣ ಮೀಸಲಾತಿ** ಕೋರಬಹುದೇ? | ಗ್ರಾಮೀಣ ಮೀಸಲಾತಿಗೆ ಕೆನೆ ಪದರ ನೀತಿ (Creamy layer Policy ಅನ್ವಯಿಸುವುದರಿಂದ **ಗ್ರಾಮೀಣ ಮೀಸಲಾತಿ** ಕ್ಲೇಮು ಮಾಡಲು ಬರುವುದಿಲ್ಲ. |
| 19 | ನಾನು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ /ಪ್ರವರ್ಗ-Iರ ಅಭ್ಯರ್ಥಿಯಾಗಿದ್ದು ನನಗೆ Creamy layer ನೀತಿ ಅನ್ವಯಿಸುತ್ತದೆಯೇ? **ಗ್ರಾಮೀಣ ಮೀಸಲಾತಿ** ಕೋರಬಹುದೇ? | ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ /ಪ್ರವರ್ಗ-Iರ ಅಭ್ಯರ್ಥಿಗಳಿಗೆ ಆದಾಯದ ಮಿತಿ ನಿಗದಿಪಡಿಸಿರುವುದಿಲ್ಲವಾದ್ದರಿಂದ **ಗ್ರಾಮೀಣ ಮೀಸಲಾತಿ** ಕೋರಿದ ಅಭ್ಯರ್ಥಿಗಳಿಗೆ Creamy layer ನೀತಿ ಅನ್ವಯಿಸುವುದಿಲ್ಲ. |
| 20 | ನಾನು ಸಾಮಾನ್ಯ ವರ್ಗ (GM) ಅಭ್ಯರ್ಥಿಯಾಗಿದ್ದು, ವಾರ್ಷಿಕ ರೂ.8.00 ಲಕ್ಷಕ್ಕೂ ಹೆಚ್ಚು ಆದಾಯ ಹೊಂದಿ, ಕೆನೆ ಪದರ ಮಿತಿಗೆ ಒಳಪಡುತ್ತೇನೆ (Creamy layer). ಗ್ರಾಮೀಣ ಮೀಸಲಾತಿ ಹೊರತುಡಿಸಿ, ಉಳಿದಂತೆ ಸಮತಲ ಮೀಸಲಾತಿಯಾದ ಮಾಜಿ ಸೈನಿಕ, ಕನ್ನಡ ಮಾಧ್ಯಮ, ಅಂಗವೈಕಲ್ಯ, ಯೋಜನಾ ನಿರಾಶ್ರಿತ, ತೃತೀಯ ಲಿಂಗಿ, ಮೀಸಲಾತಿ ಕೋರಬಹುದೇ? | ವಾರ್ಷಿಕ ರೂ.8.00 ಲಕ್ಷಕ್ಕೂ ಹೆಚ್ಚು ಆದಾಯ ಹೊಂದಿ, ಕೆನೆ ಪದರ ಮಿತಿಗೆ (Creamy layer)ಒಳಪಡುವ ಸಾಮಾನ್ಯ ವರ್ಗ (GM)ಕ್ಕೆ ಸೇರುವ ಅಭ್ಯರ್ಥಿಗಳು, ಗ್ರಾಮೀಣ ಮೀಸಲಾತಿ (ಕೆನೆಪದರ ನೀತಿ ಅನ್ವಯಿಸುವುದರಿಂದ) ಹೊರತುಡಿಸಿ, ಉಳಿದಂತೆ ಸಮತಲ ಮೀಸಲಾತಿಯಾದ ಮಾಜಿ ಸೈನಿಕ, ಕನ್ನಡ ಮಾಧ್ಯಮ, ಅಂಗವೈಕಲ್ಯ, ಯೋಜನಾ ನಿರಾಶ್ರಿತ, ತೃತೀಯ ಲಿಂಗಿ, ಮೀಸಲಾತಿ ಕೋರಬಹುದಾಗಿದೆ. |
| 21 | ನಾನು 2A ಪ್ರವರ್ಗಕ್ಕೆ ಸೇರಿದ್ದು, 1ನೇ ತರಗತಿಯಿಂದ 10ನೇ ತರಗತಿಯವರೆಗೆ ಗ್ರಾಮೀಣ ಪ್ರದೇಶದಲ್ಲಿ ವ್ಯಾಸಂಗ ಮಾಡಿದ್ದೇನೆ. ನನ್ನ ತಂದೆಯವರು ಸರ್ಕಾರಿ ನೌಕರಿಯಲ್ಲಿದ್ದು, ವಾರ್ಷಿಕ ಆದಾಯ ರೂ,8.00 ಲಕ್ಷಕ್ಕಿಂತ ಹೆಚ್ಚಿರುತ್ತದೆ. ಸಾಮಾನ್ಯ (GM) ವರ್ಗದಲ್ಲಿ ಗ್ರಾಮೀಣ ಅಭ್ಯರ್ಥಿ ಮೀಸಲಾತಿ ಅನ್ವಯಿಸುತ್ತದೆಯೇ? | ಗ್ರಾಮೀಣ ಮೀಸಲಾತಿಗೆ ಕೆನೆಪದರ ನೀತಿ ಅನ್ವಯಿಸುವುದರಿಂದ ಅಭ್ಯರ್ಥಿಯ ಕುಟುಂಬದ ವಾರ್ಷಿಕ ಆದಾಯ ರೂ.8.00 ಲಕ್ಷಕ್ಕೂ ಹೆಚ್ಚಿದ್ದಲ್ಲಿ ಗ್ರಾಮೀಣ ಮಿಸಲಾತಿಯನ್ನು ಕೋರಲು ಅವಕಾಶವಿರುವುದಿಲ್ಲ. |
| | **ಶೈಕ್ಷಣಿಕ ವಿದ್ಯಾರ್ಹತೆಗೆ ಸಂಬಂಧಿಸಿದಂತೆ** | |
| 22 | ನಾನು ಜಿ.ಪಿ.ಟಿ ಹುದ್ದೆಯ ಆಕಾಂಕ್ಷಿಯಾಗಿದ್ದು, ಪದವಿಯಲ್ಲಿ ಸರಾಸರಿ ಅಂಕಗಳನ್ನು ಗಳಿಸಿರಬೇಕೆ? ಅಥವಾ ಹುದ್ದೆಯ ವಿಷಯಕ್ಕೆ ನಿಗದಿಪಡಿಸಿದ ಸಮೂಹ ವಿಷಯಗಳಲ್ಲಿ ಶೇ.50 ರಷ್ಟು ಗಳಿಸಿರಬೇಕೆ? | ಪದವಿಯಲ್ಲಿ ಒಟ್ಟಾರೆಯಾಗಿ ಸರಾಸರಿ ಶೇ.50ರಷ್ಟು ಅಂಕಗಳನ್ನು ಹೊಂದಿದ್ದರೆ ಅರ್ಜಿ ಸಲ್ಲಿಸಬಹುದು. |
| 23 | ನಾನು ಪ್ರಾಥಮಿಕ ಶಾಲಾ ಶಿಕ್ಷಕ (PST), ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕ (GPT ಮತ್ತು ಪ್ರೌಢಶಾಲಾ ಸಹಶಿಕ್ಷಕ (AM) ಈ ಮೂರೂ ವೃಂದಗಳಿಗೆ ವಿದ್ಯಾರ್ಹತೆಯನ್ನು ಹೊಂದಿದ್ದೇನೆ. ನಾನು ಎಲ್ಲಾ ಮೂರೂ ವೃಂದಗಳಿಗೆ ಒಂದೇ ಜಿಲ್ಲೆಯಲ್ಲಿ ಅರ್ಜಿ ಸಲ್ಲಿಸಬೇಕೆ? | ಪ್ರಾಥಮಿಕ ಶಾಲಾ ಶಿಕ್ಷಕ (PST), ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕ (GPT ಮತ್ತು ಪ್ರೌಢಶಾಲಾ ಸಹಶಿಕ್ಷಕ (AM) ಈ ಮೂರೂ ವೃಂದಗಳಿಗೆ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಯು ತಾನು ಇಚ್ಛೆಯಂತೆ ಬೇರೆ ಬೇರೆ ವಂದಕ್ಕೆ ಬೇರೆ ಬೇರೆ ಜಿಲ್ಲೆಯಲ್ಲಿ ಅರ್ಜಿ ಸಲ್ಲಿಸಬಹುದು. ಆದರೆ ಒಂದು ವೃಂದಕ್ಕೆ ಒಂದು ಜಿಲ್ಲೆ ಆಯ್ಕೆ ಮಾಡಿಕೊಳ್ಳಬೇಕಿರುತ್ತದೆ. |
| 24 | GPT ಕನ್ನಡ ಭಾಷಾ ವಿಷಯದ ಹುದ್ದೆಗೆ ಪದವಿಯಲ್ಲಿ ಕನ್ನಡ ಭಾಷೆಯನ್ನು ಐಚ್ಛಿಕವಾಗಿ ಮೂರೂ ವರ್ಷಗಳು ಅಧ್ಯಯನ ಮಾಡಿರಬೇಕೆ? ಅಥವಾ ಪದವಿಯಲ್ಲಿ ಭಾಷೆಯನ್ನಾಗಿ ಅಧ್ಯಯನ ಮಾಡಿದ್ದರೆ ಸಾಕಾಗುವುದಿಲ್ಲವೇ? | GPT ಕನ್ನಡ ಭಾಷಾ ವಿಷಯದ ಹುದ್ದೆಗೆ ಅರ್ಜಿ ಸಲ್ಲಿಸಲು ಬಯಸುವ ಅಭ್ಯರ್ಥಿಯು ಪದವಿಯಲ್ಲಿ ಕನ್ನಡ ಭಾಷೆಯನ್ನು ಐಚ್ಛಿಕವಾಗಿ ಮೂರೂ ವರ್ಷಗಳು ಅಧ್ಯಯನ ಮಾಡಿರುವುದು ಕಡ್ಡಾಯವಾಗಿರುತ್ತದೆ. |

| | | |
|---|---|---|
| 25 | ನಾನು ಪದವಿಯನ್ನು ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡಿದ್ದು, ಪ್ರೌಢಶಾಲಾ ಶಿಕ್ಷಕರ ನೇಮಕಾತಿಯ ಕೋರ್ ವಿಷಯ ವಿಷಯಕ್ಕೆ ಅಂದರೆ ಕಲಾಕನ್ನಡ (ಆಂಗ್ಲ ಮಾಧ್ಯಮ) ಜೀವವಿಜ್ಞಾನ (ಆಂಗ್ಲ ಮಾಧ್ಯಮ) ಹುದ್ದೆಗೆ ಅರ್ಜಿ ಸಲ್ಲಿಸಬಹುದೇ? | ಇಂಗ್ಲೀಷ್ ಭಾಷೆಯನ್ನು ಪದವಿಯಲ್ಲಿ ಒಂದು ಭಾಷೆಯನ್ನಾಗಿ ಅಧ್ಯಯನ ಮಾಡಿರಬೇಕು. **ಅಥವಾ SSLC** ಯಲ್ಲಿ ಆಂಗ್ಲಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಅಧ್ಯಯನ ಮಾಡಿರಬೇಕು. **ಅಥವಾ SSLC ಯನ್ನು** ಅಥವಾ ಪದವಿಯನ್ನು ಇಂಗ್ಲೀಷ್ ಮಾಧ್ಯಮದಲ್ಲಿ ಅಧ್ಯಯನ ಮಾಡಿರಬೇಕು. **ಅಥವಾ** ಯು.ಜಿ.ಸಿ ಮಾನ್ಯತೆ ಹೊಂದಿರುವ ವಿಶ್ವವಿದ್ಯಾಲಯದಿಂದ ಆ ಭಾಷೆಯ ಡಿಪ್ಲೊಮಾ ಅರ್ಹತೆ ಹೊಂದಿರತಕ್ಕದ್ದು. |
| 26 | ಪ್ರಾಥಮಿಕ ಶಾಲಾ PET-Grade-II (1 ರಿಂದ 8ನೇ ತರಗತಿ) ವೃಂದದ ಹುದ್ದೆಗೆ ಮತ್ತು ಪೌಢಶಾಲಾ ಸಹಶಿಕ್ಷಕ ಹುದ್ದೆಗೆ, PET-Grade-II, PET-Grade-I ಹುದ್ದೆಗೆ ಅರ್ಜಿ ಸಲ್ಲಿಸಲು TET/CTET ಅಗತ್ಯವೆ? | ಪ್ರಾಥಮಿಕ ಶಾಲಾ PET-Grade-II (1 ರಿಂದ 8ನೇ ತರಗತಿ) ವೃಂದದ ಹುದ್ದೆಗೆ ಮತ್ತು ಪೌಢಶಾಲಾ ಸಹಶಿಕ್ಷಕ ಹುದ್ದೆಗೆ, PET-Grade-I ಹುದ್ದೆಗೆ ಅರ್ಜಿ ಸಲ್ಲಿಸಲು TET/CTET ಯ ಅಗತ್ಯವಿರುವುದಿಲ್ಲ. |
| 27 | ಪ್ರಾಥಮಿಕ ಶಾಲಾ ಶಿಕ್ಷಕರ (1 ರಿಂದ 5ನೇ ತರಗತಿ) ವೃಂದದ ಹುದ್ದೆಗೆ ಅರ್ಜಿ ಸಲ್ಲಿಸಲು TET/CTET ಅಗತ್ಯವೆ? | TET/CTET ಪತ್ರಿಕೆ-1 ಕಡ್ಡಾಯವಾಗಿ ಪಡೆದಿರಬೇಕು. SC/ST/C-I/ PH ಅಭ್ಯರ್ಥಿಗಳು ಶೇ.55 ಅಂಕಗಳನ್ನು ಹಾಗೂ GM ಹಾಗೂ 2A, 2B, 3A, 3B ಪ್ರವರ್ಗಗಳಿಗೆ ಸೇರಿದ ಅಭ್ಯರ್ಥಿಗಳು ಶೇ,60ರಷ್ಟು ಅಂಕಗಳನ್ನು ಗಳಿಸಿರಬೇಕು. |
| 28 | ಪದವೀಧರ ಪ್ರಾಥಮಿಕ ಶಿಕ್ಷಕ (9 ರಿಂದ 8ನೇ ತರಗತಿ) ವೃಂದ ಹುದ್ದೆಗೆ, PET-Grade-II, PET-Grade-I ಹುದ್ದೆಗೆ ಅರ್ಜಿ ಸಲ್ಲಿಸಲು TET/CTET ಅಗತ್ಯವೆ? | TET/CTET ಪತ್ರಿಕೆ-II ಕಡ್ಡಾಯವಾಗಿ ಪಡೆದಿರಬೇಕು. SC/ST/C-I/ PH ಅಭ್ಯರ್ಥಿಗಳು ಶೇ.55 ಅಂಕಗಳನ್ನು ಹಾಗೂ GM ಹಾಗೂ 2A, 2B, 3A, 3B ಪ್ರವರ್ಗಗಳಿಗೆ ಸೇರಿದ ಅಭ್ಯರ್ಥಿಗಳು ಶೇ,60ರಷ್ಟು ಅಂಕಗಳನ್ನು ಗಳಿಸಿರಬೇಕು. |
| **ಸೇವಾ ನಿರತ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ** | | |
| 29 | ನಾನು ಸೇವಾ ನಿರತ ಅಭ್ಯರ್ಥಿಯಾಗಿದ್ದು, NOC ಯನ್ನು ಅರ್ಜಿಯೊಂದಿಗೆ ಸಲ್ಲಿಸಬೇಕಾ? | ಸೇವಾನಿರತ ಅಭ್ಯರ್ಥಿಯು NOC ಯನ್ನು ಮೂಲದಾಖಲೆಗಳ ಪರಿಶೀಲನೆಗೆ ಆಯ್ಕೆಯಾದಲ್ಲಿ ಪರಿಶೀಲನಾ ವೇಳೆಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದು ಸಲ್ಲಿಸುವುದು ಕಡ್ಡಾಯ. |
| 30 | ನಾನು ಶಾಲಾ ಶಿಕ್ಷಣ ಇಲಾಖೆಯಲ್ಲಿ GPT ಶಿಕ್ಷಕಿಯಾಗಿ/ಶಿಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, 2026ನೇ ಸಾಲಿನಲ್ಲಿ ಮತ್ತೊಮ್ಮೆ GPT ಹುದ್ದೆಗೆ ಅರ್ಜಿ ಸಲ್ಲಿಸಲು ಅವಕಾಶವಿದೆಯೇ? | ಶಾಲಾ ಶಿಕ್ಷಣ ಇಲಾಖೆಯಲ್ಲಿ ಈಗಾಗಲೇ GPT ಶಿಕ್ಷಕಿಯಾಗಿ/ಶಿಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, 2026ನೇ ಸಾಲಿನಲ್ಲಿ ಮತ್ತೊಮ್ಮೆ GPT ಹುದ್ದೆಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ. |
| 31 | ನಾನು ಶಾಲಾ ಶಿಕ್ಷಣ ಇಲಾಖೆಯಲ್ಲಿ GPT ಶಿಕ್ಷಕಿಯಾಗಿ/ಶಿಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, 2026ನೇ ಸಾಲಿನಲ್ಲಿ ಮತ್ತೊಮ್ಮೆ ಪ್ರೌಢಶಾಲಾ ಸಹಶಿಕ್ಷಕರ ಹುದ್ದೆಗೆ ಅರ್ಜಿ ಸಲ್ಲಿಸಲು ಅವಕಾಶವಿದೆಯೇ? | ಶಾಲಾ ಶಿಕ್ಷಣ ಇಲಾಖೆಯಲ್ಲಿ GPT ಶಿಕ್ಷಕಿಯಾಗಿ/ಶಿಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, 2026ನೇ ಸಾಲಿನಲ್ಲಿ ಮತ್ತೊಮ್ಮೆ ಪ್ರೌಢಶಾಲಾ ಸಹಶಿಕ್ಷಕರ ಹುದ್ದೆಗೆ ಅರ್ಜಿ ಸಲ್ಲಿಸಲು ಅವಕಾಶವಿದೆ |
| 32 | ನಾನು ಅನುದಾನಿತ ಶಾಲೆಯಲ್ಲಿ ಕಳೆದ ಎರಡು ವರ್ಷದಿಂದ ಕಾರ್ಯ ನಿರ್ವಹಿಸುತ್ತಿದ್ದೇನೆ. ಸರ್ಕಾರಿ ಪ್ರೌಢಶಾಲಾ ಶಿಕ್ಷಕಿಯ ಹುದ್ದೆಗೆ ಅರ್ಜಿ ಸಲ್ಲಿಸಬಹುದಾ? | ಅನುದಾನಿತ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಸರ್ಕಾರಿ ಪ್ರೌಢಶಾಲಾ ಶಿಕ್ಷಕಿಯ ಹುದ್ದೆಗೆ ಅರ್ಜಿ ಸಲ್ಲಿಸಬಹುದು. |
| 33 | ನಾನು ಇತರೆ ಇಲಾಖೆಯಲ್ಲಿ ಸರ್ಕಾರಿ ಸೇವೆ ಸಲ್ಲಿಸುತ್ತಿದ್ದು, NOC ಪಡೆದು ಅರ್ಜಿ ಸಲ್ಲಿಸಬಹುದಾ? | ಈಗ NOC ಇಲ್ಲದೇ ಅರ್ಜಿ ಸಲ್ಲಿಸಬಹುದು, 1:2 ಮೂಲದಾಖಲೆಗಳ ಪರಿಶೀಲನೆಗೆ ಆಯ್ಕೆಯಾದಲ್ಲಿ ದಾಖಲೆಗಳ ಪರಿಶೀಲನಾ ವೇಳೆಯಲ್ಲಿ ನೇಮಕಾತಿ ಪ್ರಾಧಿಕಾರಕ್ಕೆ ಪರಿಶೀಲನೆಗೆ ಹಾಜರುಪಡಿಸಬೇಕಿರುತ್ತದೆ. |
| **ಯೋಜನಾ ನಿರಾಶ್ರಿತ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ** | | |
| 34 | ವಿವಾಹಿತ ಮಹಿಳೆಯಾಗಿದ್ದು, ತಂದೆಯ ಹೆಸರಿನಲ್ಲಿ ಪಡೆದ ಯೋಜನಾ ನಿರಾಶ್ರಿತ ಪ್ರಮಾಣ ಪತ್ರ ಸಲ್ಲಿಸಬಹುದೆ? | ಸಲ್ಲಿಸಬಹುದು, ನಮೂನೆಯಲ್ಲಿ ಅಭ್ಯರ್ಥಿಯ ಹೆಸರು ಸ್ಪಷ್ಟವಾಗಿ ನಮೂದಾಗಿರಬೇಕು. |

**ವಿಶೇಷ ಸೂಚನೆ:** ಸದರಿ ಪ್ರಶ್ನೋತ್ತರಗಳು, ಕಾಲಕಾಲಕ್ಕೆ ಸರ್ಕಾರದಿಂದ ಹೊರಡಿಸಲಾಗುವ ಸುತ್ತೋಲೆ, ಆದೇಶ, ಅಧಿಸೂಚನೆಗೆ ಒಳಪಟ್ಟಿರುತ್ತದೆ.

# ಕರ್ನಾಟಕ ಸರ್ಕಾರ
## ಶಾಲಾ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ
## ಕೇಂದ್ರಿಕೃತ ದಾಖಲಾತಿ ಘಟಕ, ಕೆ.ಜಿ. ರಸ್ತೆ, ಬೆಂಗಳೂರು-09

ಸಂ.DPI-CPIOCAC(ODEX)/1/2026 ದಿನಾಂಕ: 17/08/2026

**ಅಭ್ಯರ್ಥಿಗಳಿಗೆ ಮಾರ್ಗದರ್ಶಿ**

ವಿಷಯ: ಶಾಲಾ ಶಿಕ್ಷಣ ಇಲಾಖೆಯ ಸರಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಖಾಲಿಯಿರುವ ಶಿಕ್ಷಕರ ಹುದ್ದೆಗಳನ್ನು ಭರ್ತಿಗೊಳಿಸುವ ಬಗ್ಗೆ

ಸರ್ಕಾರದ ಅಧಿಸೂಚನೆ ಸಂ. ಇಪಿ 80 ಡಿಪಿಐ 2026 ದಿನಾಂಕ: 10/08/2026ರಂತೆ ಶಾಲಾ ಶಿಕ್ಷಣ ಇಲಾಖೆಯ ಕೇಂದ್ರೀಕೃತ ದಾಖಲಾತಿ ಘಟಕ, ಕೆ.ಜಿ. ರಸ್ತೆ, ಬೆಂಗಳೂರು -ನ್ನು ಪರೀಕ್ಷಾ ಪ್ರಾಧಿಕಾರವನ್ನಾಗಿ ನೇಮಿಸಿದ್ದು, ಶಾಲಾ ಶಿಕ್ಷಣ ಇಲಾಖೆಯಲ್ಲಿ ಖಾಲಿಯಿರುವ ಪ್ರಾಥಮಿಕ ಶಾಲಾ ಶಿಕ್ಷಕರು, ದೈ.ಶಿ.ಶಿ. ಗ್ರೇಡ್ 2, ಜಿಪಿಟಿ ಶಿಕ್ಷಕರು, ಗಣಕಯಂತ್ರ ವಿಜ್ಞಾನ ಶಿಕ್ಷಕರು, ಪ್ರೌಢ ಶಾಲಾ ಸಹಶಿಕ್ಷಕರು, ಪ್ರೌಢ ಶಾಲಾ ದೈ.ಶಿ.ಶಿ ಗ್ರೇಡ್ 1 ವೃಂದಗಳ 15000 ಹುದ್ದೆಗಳನ್ನು ಭರ್ತಿಗೊಳಿಸಲು ಆದೇಶಿಸಲಾಗಿದೆ. ಅದರಂತೆ, ಆಯ್ಕೆ ಪ್ರಾಧಿಕಾರಿಗಳಿಂದ ಈಗಾಗಲೇ ಅಧಿಸೂಚನೆಗಳನ್ನು ಹೊರಡಿಸಲಾಗಿದೆ.

ಈ ಅಧಿಸೂಚನೆಗಳನುಸಾರ ಪರೀಕ್ಷಾ ಪ್ರಾಧಿಕಾರಿಯಾಗಿರುವ ಕೇಂದ್ರೀಕೃತ ದಾಖಲಾತಿ ಘಟಕದಿಂದ ಅಭ್ಯರ್ಥಿಗಳ ಮಾಹಿತಿ ಮತ್ತು ನೆರವಿಗಾಗಿ ಈ ಕೆಳಗಿನಂತೆ ಸೂಚನೆಗಳು ಮತ್ತು ನಿರ್ದೇಶನಗಳನ್ನು ನೀಡಲಾಗಿದೆ. ಇವುಗಳನ್ನು ಸರಿಯಾಗಿ ಅರ್ಥೈಸಿಕೊಂಡು ಅನುಸರಿಸಲು ಕೋರಲಾಗಿದೆ.

1. **ಆಯ್ಕೆ ಪ್ರಾಧಿಕಾರಿಗಳಿಂದ ಅಧಿಸೂಚನೆಗಳು**: ಆಯಾಯ ಜಿಲ್ಲಾ ಮತ್ತು ವಿಭಾಗ ಮಟ್ಟದ ಆಯ್ಕೆ ಪ್ರಾಧಿಕಾರಿಗಳು ನೇಮಕಾತಿ ಅಧಿಸೂಚನೆಗಳನ್ನು ಹೊರಡಿಸಿರುವರು. ಅವುಗಳು ಪೂರ್ಣ ವಿವರಗಳನ್ನು ಒಳಗೊಂಡಿರುತ್ತವೆ. ಅವುಗಳನ್ನು ಓದಿ ಅರ್ಥೈಸಿಕೊಳ್ಳುವುದು. ಅವುಗಳಲ್ಲಿ ನೀಡಿರುವ ಎಲ್ಲಾ ಸೂಚನೆಗಳು ಮತ್ತು ಮಾಹಿತಿಯನ್ನು ಅನುಸರಿಸುವುದು.

2. ಅಧಿಸೂಚಿತ ಹುದ್ದೆಗಳ ರಾಜ್ಯವ್ಯಾಪಿ ಕ್ರೋಡೀಕೃತ ಮಾಹಿತಿ ಈ ಕೆಳಗಿನಂತಿದೆ.

1. **PST/PE Grade-2** ಅಧಿಸೂಚಿತ ಒಟ್ಟು ಹುದ್ದೆಗಳ ಅಂಕಿಅಂಶ

| ವಿಷಯಗಳು | ಸಾಮಾನ್ಯ ಕನ್ನಡ | ದೈ.ಶಿ.ಶಿಕ್ಷಕರು ಗ್ರೇಡ್-2 | ಒಟ್ಟು ಹುದ್ದೆಗಳು |
|---|---|---|---|
| NKK | 100 | 50 | **150** |
| KK | 800 | 100 | **900** |
| Total | **900** | **150** | **1050** |

2. **GPT/CST ಅಧಿಸೂಚಿತ ಒಟ್ಟು ಹುದ್ದೆಗಳ ಅಂಕಿಅಂಶ**

| ವಿಷಯಗಳು | ಕನ್ನಡ ಭಾಷೆ | ಆಂಗ್ಲ ಭಾಷೆ | ಗಣಿತ ಮತ್ತುವಿಜ್ಞಾನ | ಜೀವ ವಿಜ್ಞಾನ | ಸಮಾಜ ವಿಜ್ಞಾನ | ಗಣಕ ವಿಜ್ಞಾನ | ಒಟ್ಟು ಹುದ್ದೆಗಳು |
|---|---|---|---|---|---|---|---|
| NKK | 1697 | 430 | 1697 | 406 | 1042 | 200 | **5472** |
| KK | 860 | 213 | 1412 | 370 | 373 | 300 | **3528** |
| Total | **2557** | **643** | **3109** | **776** | **1415** | **500** | **9000** |

3. **AM/PE Grade-1 ಅಧಿಸೂಚಿತ ಹುದ್ದೆಗಳು ವಿಭಾಗವಾರು ಅಂಕಿಅಂಶ**

| ವಿಭಾಗ | AM_KAN | AM_ENG | AM_CBZ | | AM_ARTS | | PE-Grade-1 | ಒಟ್ಟು ಹುದ್ದೆಗಳು |
|---|---|---|---|---|---|---|---|---|
| | | | KM | EM | KM | EM | | |
| ಬೆಂಗಳೂರು ವಿಭಾಗ | 201 | 204 | 66 | 78 | 92 | 144 | 47 | **832** |
| ಮೈಸೂರು ವಿಭಾಗ | 169 | 170 | 76 | 90 | 83 | 126 | 34 | **748** |
| ಧಾರವಾಡ ವಿಭಾಗ | 192 | 205 | 75 | 91 | 90 | 134 | 44 | **831** |
| ಕಲಬುರ್ಗಿ ವಿಭಾಗ | 553 | 555 | 252 | 301 | 218 | 335 | 325 | **2539** |
| **ಒಟ್ಟು** | **1115** | **1134** | **469** | **560** | **483** | **739** | **450** | **4950** |

**ಸಾರಾಂಶ:** ವೃಂದವಾರು ಒಟ್ಟು ಹುದ್ದೆಗಳ ವಿವಿರ ಅಂಕಿಅಂಶ

| | | |
|---|---|---|
| 1 | **PST/PE Grade-2** | **1050** |
| 2 | **GPT/CST** | **9000** |
| 3 | **AM / PE Grade-2-1** | **4950** |
| | **Grand Total** | **15,000** |

4. **ಅರ್ಜಿ ಸಲ್ಲಿಸುವಿಕೆ:**

## ದಿನಾಂಕ: 18/08/2026ರಿಂದ 07/09/2026ರವರೆಗೆ

**1)** ಅಭ್ಯರ್ಥಿಯು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು ಬಹಳ ಮಹತ್ತರವಾದ ಕಾರ್ಯವಾಗಿದೆ. ಇದನ್ನು ಅಭ್ಯರ್ಥಿಯು ಸ್ವತಃ ಉಪಸ್ಥಿತರಿದ್ದು, ಅತ್ಯಂತ ಜಾಗರೂಕತೆಯಿಂದ ಮಾಡಬೇಕು. ಅರ್ಜಿ ಸಲ್ಲಿಸುವಾಗ ಎಲ್ಲಾ ದಾಖಲೆಗಳನ್ನು ಸಿದ್ಧವಿರಿಸಿಕೊಂಡು ನಂತರ ಅಂಕಣಗಳನ್ನು ಒಂದೊಂದಾಗಿ ತುಂಬಬೇಕು. ಅರ್ಜಿ ಸಲ್ಲಿಸಲು ಆರಂಭಿಸುವ ಮುನ್ನ ಆಯಾಯ ಹುದ್ದೆಗೆ ಸಂಬಂಧಿಸಿದಂತೆ ಆಯಾಯ ಆಯ್ಕೆ ಪ್ರಾಧಿಕಾರಿಗಳು ಹೊರಡಿಸಿರುವ ಅಧಿಸೂಚನೆಗಳನ್ನು ಅತ್ಯಂತ ಜಾಗರೂಕರಾಗಿ ಓದಿ ಮನನ ಮಾಡಿಕೊಂಡು ಸೂಕ್ತ ನಿರ್ಧಾರಗಳನ್ನು ಕೈಗೊಂಡು ನಂತರದಲ್ಲಿ ಅರ್ಜಿ ಸಲ್ಲಿಸಬೇಕು. ಯಾವುದೇ ಗಡಿಬಿಡಿ, ಗೊಂದಲ, ಸಂದೇಹಗಳನ್ನು ಹೊಂದಿ ಈ ಕಾರ್ಯವನ್ನು ಮಾಡಬಾರದಾಗಿ ಸೂಚಿಸಿದೆ.

**2)** ಒಬ್ಬ ಅಭ್ಯರ್ಥಿಯು ಒಂದು ಅರ್ಜಿಯನ್ನು ಮಾತ್ರ ಸಲ್ಲಿಸಲು ಅವಕಾಶವನ್ನು ನೀಡಲಾಗಿದ್ದು, ಈ ಒಂದು ಅರ್ಜಿಯಲ್ಲಿ PST, PET Gr.1, CST, GPT, AM ಮತ್ತು PET Gr.2 ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅವಕಾಶವನ್ನು ಕಲ್ಪಿಸಲಾಗಿದೆ. ಒಬ್ಬ ಅಭ್ಯರ್ಥಿಯು ಈ ವಿಧ ವಿಧವಾದ ಕೇಡರುಗಳ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅರ್ಹತೆಯನ್ನು ಹೊಂದಿದ್ದಲ್ಲಿ, ಬೇರೆ ಬೇರೆ ಜಿಲ್ಲೆಗಳ ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಬಯಸಿದ್ದಲ್ಲಿಯೂ, ಒಂದೇ ಅರ್ಜಿಯಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

**3)** ಸಾಮಾನ್ಯವಾಗಿ ಅರ್ಜಿ ಸಲ್ಲಿಸುವಾಗ ಅಭ್ಯರ್ಥಿಗಳು ಹೆಸರಿನ ಕಾಗುಣಿತ ದೋಷಗಳನ್ನು ಸಾಕಷ್ಟು ಮಾಡುತ್ತಿರುವುದು ಕಂಡು ಬಂದಿದೆ. ಅದರೊಂದಿಗೆ, ಜಾತಿ, ವರ್ಗ, ಪ್ರವರ್ಗ, ಲಿಂಗ, RD ನಂಬರು, ಮೀಸಲಾತಿ ವಿವರಗಳು ಇತ್ಯಾದಿಗಳನ್ನು ತುಂಬುವಾಗ ತಪ್ಪು ಮಾಡುತ್ತಿರುವುದನ್ನೂ ಗಮನಿಸಲಾಗಿದೆ.ಈ ಬಗ್ಗೆ ಜಾಗ್ರತೆವಹಿಸುವುದು.

**4)** ಅರ್ಜಿ ಸಲ್ಲಿಸಲು ಅಭ್ಯರ್ಥಿಗಳು ಮೊದಲು ಇಲಾಖಾ ವೆಬ್ ಸೈಟ್ https://schooleducation.karnataka.gov.in/cacell/en**ನಲ್ಲಿ** Online Application for Recruitment of Teachers 2026" ಎಂಬ ಲಿಂಕ್ ಅನ್ನು Click ಮಾಡಬೇಕು, ನಂತರ 'New User ಎಂಬ ಬಟನ್ ಒತ್ತಿ ನೊಂದಣಿ (Registration) ಮಾಡಿಕೊಳ್ಳಬೇಕು. ತಾವು ಹೀಗೆ ತಯಾರಿಸಿಕೊಂಡ "Login credentials' ಗಳನ್ನು ತಪ್ಪದೇ ಬರೆದಿಟ್ಟುಕೊಳ್ಳುವುದು ಹಾಗೂ ಇದನ್ನು ಕಳೆದುಕೊಂಡಲ್ಲಿ ಈ ಕಛೇರಿಯಿಂದ ಯಾವುದೇ ವೈಯಕ್ತಿಕ ನೆರವನ್ನು ನೀಡಲಾಗುವುದಿಲ್ಲ. ಆದರೆ 'Forgot Password' ಪ್ರಕ್ರಿಯೆಯಿಂದ ಪಡೆದುಕೊಳ್ಳುವುದು.

**5)** Login ನೋಂದಣಿ ಸೃಷ್ಟಿಸಿದ ನಂತರ ಅಭ್ಯರ್ಥಿಗಳು USER Name, Password ನಮೂದಿಸಿ Login ಆಗಬೇಕು. ಅಭ್ಯರ್ಥಿಗಳು ಮುಂದಿನ ಹಂತಗಳಲ್ಲಿ ವೈಯಕ್ತಿಕ ವಿವರ, ಮೀಸಲಾತಿ ವಿವರ, ವೃತ್ತಿಪರ ಶಿಕ್ಷಣ ವಿದ್ಯಾರ್ಹತೆ ವಿವರ, ಶಿಕ್ಷಕರ ಅರ್ಹತಾ ಪರೀಕ್ಷೆ ವಿವರ ಅರ್ಜಿ ಸಲ್ಲಿಸುತ್ತಿರುವ ಹುದ್ದೆಗಳ ವಿವರಗಳನ್ನು ತುಂಬಬೇಕಾಗುತ್ತದೆ. ಈ ಕಾರ್ಯವನ್ನು ಅತ್ಯಂತ ಜಾಗರೂಕತೆಯಿಂದ ಮಾಡುವುದು.ಅಭ್ಯರ್ಥಿಗಳ ದಾಖಲೆಗಳ ನಿಖರತೆ ಮತ್ತು ನೈಜತೆಗಾಗಿ ಇತರೆ ಇಲಾಖೆಯ ಸಹಭಾಗಿತ್ವದಲ್ಲಿ ದಾಖಲೆಗಳ ಮತ್ತು ಅಂಕಿಅಂಶಗಳ ಸಹಜ ಸ್ಫುರಣಕ್ಕೆ ಅವಕಾಶವನ್ನು ಕಲ್ಪಿಸಲಾಗಿದೆ. ಆದರೂ ಅಭ್ಯರ್ಥಿಗಳು ಅತ್ಯಂತ ಜಾಗರೂಕತೆಯಿಂದ ಈ ಕಾರ್ಯವನ್ನು ಮಾಡುವುದು.

**6)** ಕೆಲವು ವಿಶ್ವವಿದ್ಯಾಲಯಗಳ ಅಂಕಪಟ್ಟಿಗಳಲ್ಲಿ ಅಂಕಗಳಿಗೆ ಬದಲಾಗಿ ಗ್ರೇಡ್ ನಮೂದಿಸಲಾಗಿದ್ದು, ಅಂತಹ ಸಂದರ್ಭದಲ್ಲಿ ಸಂಬಂಧಪಟ್ಟ ವಿಶ್ವವಿದ್ಯಾಲಯದ ನಿಯಮಾನುಸಾರ ಗ್ರೇಡ್ ನ್ನು ಅಂಕಗಳಿಗೆ ಪರಿವರ್ತಿಸಿ ನಿಗದಿತ ಅಂಕಣಗಳಲ್ಲಿ ಅಂಕಗಳನ್ನು ಭರ್ತಿ ಮಾಡುವುದು. ಸಂಬಂಧಿತ ಬೋರ್ಡ್/ವಿಶ್ವವಿದ್ಯಾನಿಲಯಗಳು ಗ್ರೇಡ್‌ನಿಂದ ಅಂಕಗಳಿಗೆ ಅಳವಡಿಸಲಾಗುವ ಅಂಕ ಪರಿವರ್ತನಾ ಪಟ್ಟಿಯನ್ನು ಆಯಾಯ ಬೋರ್ಡ್/ವಿಶ್ವವಿದ್ಯಾನಿಲಯಗಳು ಪ್ರಕಟಿಸಿವೆ.

**7)** ಕೆಲವು ವಿಶ್ವವಿದ್ಯಾಲಯಗಳಲ್ಲಿ ಕೆಲವು ವಿಷಯಗಳನ್ನು (ಉದಾ: Constitution of India. Computer Fundamental ಇ) (Subsidiary Subject) ಅಧ್ಯಯನ ಮಾಡಬೇಕಾಗಿರುತ್ತದೆ. ಈ ವಿಷಯಗಳ ಅಂಕಗಳನ್ನು ವಿಶ್ವವಿದ್ಯಾಲಯವು ಒಟ್ಟು ಅಂಕಗಳಿಗೆ ಪರಿಗಣಿಸಿದ್ದಲ್ಲಿ, (ಪರಿಗಣಿಸಿರುವ ಬಗ್ಗೆ ಅಂಕಪಟ್ಟಿಯ Footnote ನಲ್ಲಿ ನಮೂದಿಸಿದ್ದಲ್ಲಿ ಮಾತ್ರ) ಆ ಅಂಕಗಳನ್ನು ಸೇರಿಸಿ ಆನ್‌ಲೈನ್ ಅರ್ಜಿಯಲ್ಲಿ ಭರ್ತಿ ಮಾಡುವುದು. ಪದವಿಯ/ಬಿ.ಇಡಿ ಯ ಎಲ್ಲಾ ವರ್ಷಗಳ/ ಸೆಮಿಸ್ಟರ್‌ಗಳ ಅಂಕಪಟ್ಟಿ ಗಳಲ್ಲಿ ನಮೂದಿಸಲಾದ ಗರಿಷ್ಠ ಅಂಕಗಳು (Maximum Marks) ಹಾಗೂ ಪಡೆದ ಅಂಕಗಳನ್ನು (Obtained Marks) ಪರಿಗಣಿಸಲಾಗುವುದು. ಆದ್ದರಿಂದ ಅಭ್ಯರ್ಥಿಗಳು ಆನ್‌ಲೈನ್ ಅರ್ಜಿ ಭರ್ತಿ ಮಾಡುವಾಗ ಹುದ್ದೆಗೆ ಪದವಿ/ ಬಿ.ಇಡಿ ಇನ್ನಿತರೆ ನಿಗದಿತ ಶೈಕ್ಷಣಿಕ ವಿದ್ಯಾರ್ಹತೆಯ ಅಂಕಪಟ್ಟಿಗಳಲ್ಲಿರುವ ಸೂಚನೆಗಳನ್ನು ಪರಿಗಣಿಸಿ ಗರಿಷ್ಠ/ಪಡೆದ ಅಂಕಗಳನ್ನು ಮತ್ತು ಶೇಕಡಾವಾರು ಅಂಕಗಳನ್ನು ಲೆಕ್ಕಾಚಾರ ಮಾಡಿ ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಬೇಕು. ಇದೇ ಕ್ರಮವನ್ನು ಕೊರೋನಾ ವ್ಯಾಧಿಯ ಅವಧಿಯಲ್ಲಿ ಅನುಸರಿಸಿದ ನೀತಿಗೂ ಅನುಸರಿಸುವುದು.

**8)** ಅಭ್ಯರ್ಥಿಗಳು ತಮ್ಮ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ (ಗರಿಷ್ಠ ಅಳತೆ: 50KB) ಮತ್ತು ಸಹಿಯನ್ನು (ಗರಿಷ್ಠ ಅಳತ: 50KB) ಸ್ಕ್ಯಾನ್ ಮಾಡಿ ಅರ್ಜಿಯೊಂದಿಗೆ ಅಪ್ ಲೋಡ್ ಮಾಡುವುದು ಕಡ್ಡಾಯವಾಗಿದೆ.

**9)** ಅಧಿಸೂಚನೆಯಲ್ಲಿ ನಿಗದಿಪಡಿಸಿರುವಂತೆ ನಿಗದಿತ ಶುಲ್ಕವನ್ನು ಅರ್ಜಿಯೊಂದಿಗೆ ಪಾವತಿಸುವುದು ಕಢ್ಡಾಯವಾಗಿದೆ. ಈ ಬಗ್ಗೆ ಜಾಗರೂಕತೆಯಿಂದ ವ್ಯವಸ್ಥೆ ಮಾಡಿಕೊಳ್ಳುವುದು. **ಅರ್ಜಿ ಶುಲ್ಕವನ್ನು "ONLINE"**

ಮೂಲಕವೇ INTERNET BANKING /CREDIT CARD DEBIT CARD ಅಥವಾ ಬ್ಯಾಂಕ್ ಚಲನ್ ಮೂಲಕವೇ ಪಾವತಿಸತಕ್ಕದ್ದು. ಇನ್ಯಾವುದೇ ರೂಪದಲ್ಲಿ ಶುಲ್ಕ ಪಾವತಿಸಲು ಅವಕಾಶವಿರುವುದಿಲ್ಲ. ಶುಲ್ಕ ಪಾವತಿಸದಿದ್ದಲ್ಲಿ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಪೂರ್ಣಗೊಳ್ಳದು; ಹಾಗೂ ಒಮ್ಮೆ ಜಮಾ ಮಾಡಿದ ಮೊಬಲಗನ್ನು ಮರುಪಾವತಿಸಲಾಗುವುದಿಲ್ಲ. ಸದರಿ ಶುಲ್ಕವನ್ನು ಇತರೆ ಯಾವುದೇ ಪರೀಕ್ಷೆ ಅಥವಾ ನೇಮಕಾತಿಗಳಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದಿಲ್ಲ.

**10)** ಪ್ರತಿ ಹಂತದಲ್ಲೂ ಅಗತ್ಯವಿರುವ ಅಧಿಕೃತ ಮಾಹಿತಿಯ ದಾಖಲೆಗಳನ್ನು ಎಚ್ಚರಿಕೆಯಿಂದ ಮೊದಲೇ ಸಿದ್ಧಪಡಿಸಿಟ್ಟುಕೊಂಡು, ಸರಿಯಾದ ಮಾಹಿತಿ ಭರ್ತಿ ಮಾಡಿರುವುದನ್ನು ಖಾತ್ರಿಪಡಿಸಿಕೊಂಡ ನಂತರವೇ ಆನ್‌ಲೈನ್ ಅರ್ಜಿಗಳನ್ನು ಪೂರ್ಣಗೊಳಿಸಿ **Submit** ಮಾಡುವುದು. ಅಭ್ಯರ್ಥಿಯು ಅಂತಿಮವಾಗಿ Submit ಮಾಡಿ ಘೋಷಣೆ (Declaration) ನೀಡಿದ ನಂತರದಲ್ಲಿ ಅರ್ಜಿಯಲ್ಲಿನ ಯಾವುದೇ ಮಾಹಿತಿಯನ್ನು ತಿದ್ದುಪಡಿ ಮಾಡಲು ಅವಕಾಶವಿರುವುದಿಲ್ಲ. **ಅರ್ಜಿ ಸಲ್ಲಿಸಿದ ನಂತರದಲ್ಲಿ ಕಡ್ಡಾಯವಾಗಿ ಅರ್ಜಿಯನ್ನು ಮುದ್ರಿಸಿಕೊಳ್ಳುವುದು.**

**11)** ಅರ್ಜಿಯಲ್ಲಿನ ಮಾಹಿತಿಗಳು ದೋಷಪೂರಿತ ಹಾಗೂ ತಪ್ಪಾಗಿದ್ದಲ್ಲಿ, ಅಭ್ಯರ್ಥಿಗಳೇ ಸಂಪೂರ್ಣವಾಗಿ ಜವಾಬ್ದಾರರಾಗಿರುತ್ತಾರೆ ಹಾಗೂ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

**12) ONLINE** ಅರ್ಜಿಯ ಮೂಲಕ ನೀಡಿರುವ ಮಾಹಿತಿಗಳನ್ನೇ ಆಧಾರವಾಗಿಟ್ಟುಕೊಂಡು ಅಭ್ಯರ್ಥಿಗಳ ನೇಮಕಾತಿ ಪ್ರಕ್ರಿಯೆಯನ್ನು ನಡೆಸುವುದರಿಂದ ಯಾವುದೇ ಹಂತದಲ್ಲಿ ಅಪೂರ್ಣ / **ಅಸ್ಪಷ್ಟ** / ತಪ್ಪು ಮಾಹಿತಿ ನೀಡಿದಲ್ಲಿ ಅಭ್ಯರ್ಥಿಗಳೇ ಸಂಪೂರ್ಣ ಹೊಣೆಗಾರರಾಗಿರುತ್ತಾರೆ ಹಾಗೂ ಅಂತಹವರ ಅಭ್ಯರ್ಥಿತನವನ್ನು ರದ್ದುಪಡಿಸಲಾಗುವುದು.

**13)** ಅರ್ಜಿಯಲ್ಲಿ ನಮೂದಿಸುವ ಮೊಬೈಲ್ ಸಂಖ್ಯೆ ಮತ್ತು ಇ-ಮೇಲ್ ವಿಳಾಸ, ಅಂಚೆ ವಿಳಾಸ, ಆಧಾರ್ ಸಂಖ್ಯೆ, ಭಾವಚಿತ್ರ, ಸಹಿ ಇತ್ಯಾದಿ ಸ್ವತಃ ಅಭ್ಯರ್ಥಿಯದೇ ಆಗಿರತಕ್ಕದ್ದು. ಅದು/ಅವು ನೈಜತೆಯಿಂದ ಕೂಡಿಲ್ಲದಿದ್ದಲ್ಲಿ ಅಥವಾ ನೇಮಕಾತಿ ಪ್ರಕ್ರಿಯೆ ಮುಗಿಯುವ ಮೊದಲು ಬದಲಾವಣೆ ಮಾಡಿದ್ದಲ್ಲಿ ಆಗಬಹುದಾದ.ಅಡ್ಡ ಪರಿಣಾಮಗಳಿಗೆ ಅಭ್ಯರ್ಥಿಗಳೇ ಹೊಣೆಗಾರರಾಗಿರುತ್ತಾರೆ.

**14)** ONLINE ಅರ್ಜಿಯಲ್ಲಿ ಮೀಸಲಾತಿ ಸೌಲಭ್ಯಕ್ಕಾಗಿ ಇರುವ ಅಂಕಣವನ್ನು, ಮೀಸಲಾತಿ ಬಯಸುವ ಅಭ್ಯರ್ಥಿಗಳು ಕಡ್ಡಾಯವಾಗಿ ಭರ್ತಿ ಮಾಡತಕ್ಕದ್ದು. ಅಂಕಣವನ್ನು ಖಾಲಿ ಬಿಟ್ಟಲ್ಲಿ ಅಥವಾ ತಪ್ಪಾಗಿ ನಮೂದಿಸಿದ್ದಲ್ಲಿ ಅದರಿಂದಾಗುವ ತೊಂದರೆಗಳಿಗೆ ಅಭ್ಯರ್ಥಿಗಳೇ ನೇರ ಹೊಣೆಗಾರರಾಗಿರುತ್ತಾರೆ. ನಂತರ ಯಾವುದೇ ಹಂತದಲ್ಲಿ ಮೀಸಲಾತಿಯನ್ನು ಸೇರ್ಪಡೆ/ತಿದ್ದುಪಡಿ ಮಾಡಲು ಅವಕಾಶವಿರುವುದಿಲ್ಲ.

**15)** ಮುದ್ರಿತ ಅರ್ಜಿಯು ಒಂದು ವೇಳೆ ಕಳೆದು ಹೋದಲ್ಲಿ ಮೇಲೆ ತಿಳಿಸಿದ ವೆಬ್ ಸೈಟ್ ನಲ್ಲಿ ನಿಮ್ಮ User ID and Password ಗಳನ್ನು ಭರ್ತಿ ಮಾಡಿ ಪ್ರತಿಯನ್ನು ಪಡೆದುಕೊಳ್ಳಬಹುದಾಗಿದೆ.

**16)** ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಿದ ಅಭ್ಯರ್ಥಿಯ ಎಲ್ಲಾ ವಿವರಗಳು ಸಮರ್ಪಕವಾಗಿದೆ ಎಂದು ದೃಢಪಡಿಸಿಕೊಂಡು ಘೋಷಣೆ ನೀಡಿದ ನಂತರದಲ್ಲಿ ಯಾವುದೇ ಬದಲಾವಣೆಗೆ ಅವಕಾಶ ಇರುವುದಿಲ್ಲ.

**17)** ಅಭ್ಯರ್ಥಿಗಳು ಅರ್ಜಿಗಳನ್ನು ONLINE ಮೂಲಕವೇ ಸಲ್ಲಿಸಬೇಕು. ಇತರೆ ಯಾವುದೇ ನಮೂನೆಯಲ್ಲಾಗಲಿ ಅಥವಾ ಬೆರಳಚ್ಚು/ಫೋಟೋ ಪ್ರತಿ ಮಾಡಿರುವ/ ಕೈ ಬರಹದಿಂದ ಬರೆದಿರುವ ಅರ್ಜಿಗಳನ್ನು ಸಲ್ಲಿಸಲು ಅವಕಾಶವಿರುವುದಿಲ್ಲ ಮತ್ತು ಅಂತಹ ಅರ್ಜಿಗಳನ್ನು ಈ ಕಛೇರಿಯಲ್ಲಿ ಸ್ವೀಕರಿಸಲಾಗುವುದಿಲ್ಲ.

**5. ಅರ್ಜಿ ಸಲ್ಲಿಸಲು ಬೇಕಾದ ದಾಖಲೆಗಳು ಮತ್ತು ವಿದ್ಯಾರ್ಹತೆ:** ಆಯಾಯ ಆಯ್ಕೆ ಪ್ರಾಧಿಕಾರಿಯು ಹೊರಡಿಸಿರುವ ಅಧಿಸೂಚನೆಗಳನ್ನು ಅನುಸರಿಸುವುದು.

## 6. ಅರ್ಹತಾ ಪರೀಕ್ಷೆ:

**1) ತರಗತಿ 1ರಿಂದ 8 ತನಕ ಬೋಧಿಸುವ ಶಿಕ್ಷಕರು (TET) ಶಿಕ್ಷಕರ ಅರ್ಹತಾ ಪರೀಕ್ಷೆಯ ಅರ್ಹತಾ ಪ್ರಮಾಣಪತ್ರವನ್ನು ಹೊಂದಿರುವುದು ಕಡ್ಡಾಯವಾಗಿದೆ.**

**ಅ)** ಪ್ರಾಥಮಿಕ ಶಾಲಾ ಶಿಕ್ಷಕರು: (1-5): **ಪೇಪರ್- 1**

**ಆ)** ಜಿಪಿಟಿ ಶಿಕ್ಷಕರು: (6-8) **ಪೇಪರ್: 2**

**ಇ)** ಗಣಕಯಂತ್ರ ವಿಜ್ಞಾನ ಶಿಕ್ಷಕರು (1-8) **ಪೇಪರ್- 2**

**2) ಪ್ರೌಢ ಶಾಲಾ ಸಹಶಿಕ್ಷಕರು, ಪ್ರೌಢ ಶಾಲಾ ದೈ.ಶಿ.ಶಿ ಗ್ರೇಡ್ 1, ಪ್ರಾಥಮಿಕ ಶಾಲಾ ದೈ.ಶಿ.ಶಿ. ಗ್ರೇಡ್ 2 - ಶಿಕ್ಷಕರು (TET) ಶಿಕ್ಷಕರ ಅರ್ಹತಾ ಪರೀಕ್ಷೆಯ ಅರ್ಹತಾ ಪ್ರಮಾಣಪತ್ರವನ್ನು ಹೊಂದಿರುವುದು ಕಡ್ಡಾಯವಾಗಿರುವುದಿಲ್ಲ.**

7. **ಪರೀಕ್ಷಾ ಕ್ರಮ:** ಈ ಆಯ್ಕೆ ಪರೀಕ್ಷೆಯನ್ನು ಬಹು ಆಯ್ಕೆಯ ವಸ್ತುನಿಷ್ಠ ಉತ್ತರ ಮಾದರಿಯ ಪ್ರಶ್ನೆ ಪತ್ರಿಕೆಗಳ ಮತ್ತು OMR ಹಾಳೆಗಳ ಮೂಲಕ ನಡೆಸಲಾಗುತ್ತದೆ. ಅಭ್ಯರ್ಥಿಯು ಅರ್ಜಿ ಸಲ್ಲಿಸಿದ ಪ್ರತಿ ಕೇಡರಿನ ಹುದ್ದೆಗೆ ಸಂಬಂಧಿಸಿದಂತೆ **ಪತ್ರಿಕೆ- 1 ಮತ್ತು ಪತ್ರಿಕೆ- 2- ಈ ಎರಡೂ ಪತ್ರಿಕೆಗಳ ಪರೀಕ್ಷೆಗೆ ಹಾಜರಾಗುವುದು ಕಡ್ಡಾಯವಾಗಿದೆ.**

1. **PST/PE-Grade-2:** (ಪಠ್ಯಕ್ರಮಕ್ಕಾಗಿ ವೆಬ್ ಸೈಟನ್ನು ನೋಡಿರಿ)

- **ಪತ್ರಿಕೆ-1**: **ಸಾಮಾನ್ಯ ಪತ್ರಿಕೆ**- 100 ಪ್ರಶ್ನೆಗಳಿಗೆ 100 ಅಂಕಗಳು: **ವಸ್ತುನಿಷ್ಠ ಬಹು ಆಯ್ಕೆ ಮಾದರಿಯ ಪ್ರಶ್ನೆ ಪತ್ರಿಕೆ- ಆಂಗ್ಲ ಮತ್ತು ಕನ್ನಡ ಭಾಷೆಗಳಲ್ಲಿರುತ್ತವೆ;** (OMR) **ಓ.ಎಂ.ಆರ್ ನಲ್ಲಿ ಉತ್ತರಿಸುವುದು**.
- **ಪತ್ರಿಕೆ-2: ನಿರ್ದಿಷ್ಠ ವಿಷಯ:** 100 ಪ್ರಶ್ನೆಗಳಿಗೆ 100 ಅಂಕಗಳು: **ವಸ್ತುನಿಷ್ಠ ಬಹು ಆಯ್ಕೆ ಮಾದರಿಯ ಪ್ರಶ್ನೆ ಪತ್ರಿಕೆ- ಆಂಗ್ಲ ಮತ್ತು ಕನ್ನಡ ಭಾಷೆಗಳಲ್ಲಿರುತ್ತವೆ;** (OMR) **ಓ.ಎಂ.ಆರ್ ನಲ್ಲಿ ಉತ್ತರಿಸುವುದು**.
- **PST:** ಗಣಿತ\ಪರಿಸರ ಅಧ್ಯಯನ\ಸಮಾಜ ವಿಜ್ಞಾನ: 100 ಪ್ರಶ್ನೆಗಳಿಗೆ 100 ಅಂಕಗಳು
- **PET Gr.2:** ದೈಹಿಕ ಶಿಕ್ಷಣ: 100 ಪ್ರಶ್ನೆಗಳಿಗೆ 100 ಅಂಕಗಳು
- **ಪತ್ರಿಕೆ-1 ಮತ್ತು ಪತ್ರಿಕೆ-2 -**ಈ ಎರಡು ಪತ್ರಿಕೆಗಳಿಗೆ ಅಭ್ಯರ್ಥಿಯು ಹಾಜರಾಗುವುದು ಕಡ್ಡಾಯ ಹಾಗೂ ಪ್ರತಿ ಪತ್ರಿಕೆಯಲ್ಲಿ **ಕನಿಷ್ಟ ಶೇ.35** ಅಂಕಗಳನ್ನು ಗಳಿಸುವವರು ಮಾತ್ರ ಆಯ್ಕೆಗೆ ಅರ್ಹತೆಯನ್ನು ಪಡೆಯುವರು.

2. **GPT/CST:** (ಪಠ್ಯಕ್ರಮಕ್ಕಾಗಿ ವೆಬ್ ಸೈಟನ್ನು ನೋಡಿರಿ)

- **ಪತ್ರಿಕೆ-1**: **ಸಾಮಾನ್ಯ ಪತ್ರಿಕೆ**- 100 ಪ್ರಶ್ನೆಗಳಿಗೆ 100 ಅಂಕಗಳು: **ವಸ್ತುನಿಷ್ಠ ಬಹು ಆಯ್ಕೆ ಮಾದರಿಯ ಪ್ರಶ್ನೆ ಪತ್ರಿಕೆ- ಆಂಗ್ಲ ಮತ್ತು ಕನ್ನಡ ಭಾಷೆಗಳಲ್ಲಿರುತ್ತವೆ;** (OMR) **ಓ.ಎಂ.ಆರ್ ನಲ್ಲಿ ಉತ್ತರಿಸುವುದು**
- **ಪತ್ರಿಕೆ-2: ನಿರ್ದಿಷ್ಠ ವಿಷಯ:** 100 ಪ್ರಶ್ನೆಗಳಿಗೆ 100 ಅಂಕಗಳು: **ವಸ್ತುನಿಷ್ಠ ಬಹು ಆಯ್ಕೆ ಮಾದರಿಯ ಪ್ರಶ್ನೆ ಪತ್ರಿಕೆ- ಆಂಗ್ಲ ಮತ್ತು ಕನ್ನಡ ಭಾಷೆಗಳಲ್ಲಿರುತ್ತವೆ;** (OMR) **ಓ.ಎಂ.ಆರ್ ನಲ್ಲಿ ಉತ್ತರಿಸುವುದು**

  **GPT/ CST:** ಆಯಾಯ ವಿಷಯದ ನಿರ್ದಿಷ್ಠ ವಿಷಯಗಳು
- **ಪತ್ರಿಕೆ-1 ಮತ್ತು ಪತ್ರಿಕೆ-2 –** ಈ ಎರಡು ಪತ್ರಿಕೆಗಳಿಗೆ ಅಭ್ಯರ್ಥಿಯು ಹಾಜರಾಗುವುದು ಕಡ್ಡಾಯ ಹಾಗೂ ಪ್ರತಿ ಪತ್ರಿಕೆಯಲ್ಲಿ **ಕನಿಷ್ಟ ಶೇ.35** ಅಂಕಗಳನ್ನು ಗಳಿಸುವವರು ಮಾತ್ರ ಆಯ್ಕೆಗೆ ಅರ್ಹತೆಯನ್ನು ಪಡೆಯುವರು.

3. **AM/ PE-Grade-1**: (ಪಠ್ಯಕ್ರಮಕ್ಕಾಗಿ ವೆಬ್ ಸೈಟನ್ನು ನೋಡಿರಿ)

- **ಪತ್ರಿಕೆ-1**: **ಸಾಮಾನ್ಯ ಪತ್ರಿಕೆ**- 100 ಪ್ರಶ್ನೆಗಳಿಗೆ 100 ಅಂಕಗಳು: **ವಸ್ತುನಿಷ್ಠ ಬಹು ಆಯ್ಕೆ ಮಾದರಿಯ ಪ್ರಶ್ನೆ ಪತ್ರಿಕೆ- ಆಂಗ್ಲ ಮತ್ತು ಕನ್ನಡ ಭಾಷೆಗಳಲ್ಲಿರುತ್ತವೆ;** (OMR) **ಓ.ಎಂ.ಆರ್ ನಲ್ಲಿ ಉತ್ತರಿಸುವುದು**.
- **ಪತ್ರಿಕೆ-2: ನಿರ್ದಿಷ್ಟ ವಿಷಯ:** 100 ಪ್ರಶ್ನೆಗಳಿಗೆ 100 ಅಂಕಗಳು: **ವಸ್ತುನಿಷ್ಠ ಬಹು ಆಯ್ಕೆ ಮಾದರಿಯ ಪ್ರಶ್ನೆ ಪತ್ರಿಕೆ- ಆಂಗ್ಲ ಮತ್ತು ಕನ್ನಡ ಭಾಷೆಗಳಲ್ಲಿರುತ್ತವೆ;** (OMR) **ಓ.ಎಂ.ಆರ್ ನಲ್ಲಿ ಉತ್ತರಿಸುವುದು**

  **HST/ PE-Grade-1:** ಆಯಾಯ ವಿಷಯದ ನಿರ್ದಿಷ್ಟ ವಿಷಯಗಳು.
- **ಪತ್ರಿಕೆ-1 ಮತ್ತು ಪತ್ರಿಕೆ-2** - ಎರಡು ಪತ್ರಿಕೆಗಳಿಗೆ ಅಭ್ಯರ್ಥಿಯು ಹಾಜರಾಗುವುದು ಕಡ್ಡಾಯ ಹಾಗೂ ಪ್ರತಿ ಪತ್ರಿಕೆಯಲ್ಲಿ **ಕನಿಷ್ಟ ಶೇ.35** ಅಂಕಗಳನ್ನು ಗಳಿಸುವವರು ಮಾತ್ರ ಆಯ್ಕೆಗೆ ಅರ್ಹತೆಯನ್ನು ಪಡೆಯುವರು

8. **ಪಠ್ಯಕ್ರಮ:** ಎಲ್ಲಾ ವೃಂದಗಳ ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ ದಿನಾಂಕ:12.08.2026ರಂದು ಅಧಿಸೂಚನೆಗಳನ್ನು ಹೊರಡಿಸಲಾಗಿದೆ. ಅವುಗಳನ್ನು ಸರಿಯಾಗಿ ಓದಿ ಮನನ ಮಾಡಿಕೊಳ್ಳುವುದು. ಎಲ್ಲಾ ವಿಷಯಗಳಿಗೆ ಪಠ್ಯಕ್ರಮವನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಇವುಗಳನ್ನು ಅನುಸರಿಸುವುದು. ಪ್ರಶ್ನೆ ಪತ್ರಿಕೆಯ ಮಾದರಿಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಇವುಗಳನ್ನು ಅನುಸರಿಸುವುದು.

## 9. ಪರೀಕ್ಷಾ ವೇಳಾಪಟ್ಟಿ:

ಅ) ಕಲ್ಯಾಣ ಕರ್ನಾಟಕ ಶೇಕಡಾ 80 ಸ್ಥಳೀಯ ವೃಂದದ ಹುದ್ದೆಗಳಿಗೆ ಮತ್ತು ಬೆಂಗಳೂರು ಬಿ.ಬಿ.ಎಂ.ಪಿ.ವ್ಯಾಪ್ತಿಯ ಕಲ್ಯಾಣ-ಕರ್ನಾಟಕ ರಾಜ್ಯ ಮಟ್ಟದ ಸ್ಥಳೀಯ ವೃಂದದ ಶೇಕಡಾ 8 ಹುದ್ದೆಗಳಿಗೆ ಹಾಗೂ ಕಲ್ಯಾಣ ಕರ್ನಾಟಕ ಶೇ.20 ಮಿಕ್ಕುಳಿದ ಹುದ್ದೆಗಳಿಗೆ ಮತ್ತು ಬೆಂಗಳೂರು ಬಿ.ಬಿ.ಎಂ.ಪಿ.ವ್ಯಾಪ್ತಿಯ ಕಲ್ಯಾಣ-ಕರ್ನಾಟಕೇತರ ಶೇಕಡಾ 92 ಹುದ್ದೆಗಳಿಗೆ ಹಾಗೂ ಇತರೆ ಜಿಲ್ಲೆಗಳ ಶೇಕಡಾ 100 ಹುದ್ದೆಗಳಿಗೆ ***ಪ್ರತ್ಯೇಕ ಸ್ಪರ್ಧಾತ್ಮಕ ಪರೀಕ್ಷೆಗಳನ್ನು*** ನಡೆಸಲಾಗುವುದು.

**ಆ) ಪರೀಕ್ಷಾ ವೇಳಾ ಪಟ್ಟಿ**

**ಅಖಿಲ ಕರ್ನಾಟಕ (ಕಲ್ಯಾಣ ಕರ್ನಾಟಕೇತರ ವ್ಯಾಪ್ತಿ)**

| ಕ್ರ.ಸಂ. | ಪರೀಕ್ಷಾ ವಿವರ | ದಿನಾಂಕಗಳು ಮತ್ತು ಸಮಯ |
|---|---|---|
| 1 | PAPER. 1: GENERAL- FOR PST, PET Gr.2: | 05/10/2026<br>10.00-12.00 |
| 2 | PAPER 2: SUBJECT SPECIFIC: MATHEMATICS, EVS AND SOCIAL SCIENCE- FOR PST | 05/10/2026<br>02.30-04.30 |
| 3 | PAPER 2: SUBJECT SPECIFIC: PHYSICAL EDUCATION FOR PET Gr. 2 | 06/10/2026<br>10.00-12.00 |

| ಕ್ರ.ಸಂ. | ಪರೀಕ್ಷಾ ವಿವರ | ದಿನಾಂಕಗಳು ಮತ್ತು ಸಮಯ |
|---|---|---|
| 1 | PAPER. 1: GENERAL- FOR GPT, CST | 08/10/2026<br>10.00-12.00 |
| 2 | PAPER- 2: SUBJECT SPECIFIC- COMPUTER SCIENCE | 08/10/2026 |

| | | |
|---|---|---|
| | FOR CST | 02.30-04.30 |
| 3 | PAPER- 2: SUBJECT SPECIFIC- SOCIAL SCIENCE - FOR SOCIAL SCIENCE<br>PAPER-2: SUBJECT SPECIFIC: SCIENCE- FOR BIOLOGICAL SCIENCE | 09/10/2026<br>10.00-12.00 |
| 4 | PAPER- 2: SUBJECT SPECIFIC: MATHEMATICS- FOR MATHEMATICS AND SCIENCE | 09/10/2026<br>02.30-04.30 |
| 5 | PAPER- 2: SUBJECT SPECIFIC- KANNADA- FOR KANNADA LANGUAGE<br>PAPER- 2: SUBJECT SPECIFIC- ENGLISH- FOR ENGLISH LANGUAGE | 10/10/2026<br>10.00-12.00 |

| ಕ್ರ.ಸಂ. | ಪರೀಕ್ಷಾ ವಿವರ | ದಿನಾಂಕಗಳು ಮತ್ತು ಸಮಯ |
|---|---|---|
| 1 | PAPER. 1- GENERAL- FOR AM, PET Gr.1 | 12/10/2026<br>10.00-12.00 |
| 2 | PAPER 2: SUBJECT SPECIFIC: PHYSICAL EDUCATION: FOR PET Gr.1: | 12/10/2026<br>02.30-04.30 |
| 3 | PAPER 2: SUBJECT SPECIFIC- SCIENCE: FOR SCIENCE<br>PAPER 2: SUBJECT SPECIFIC- ARTS: FOR ARTS | 13/10/2026<br>10.00-12.00 |
| 4 | PAPER 2: SUBJECT SPECIFIC- KANNADA- FOR KANNADA<br>PAPER 2: SUBJECT SPECIFIC- FOR ENGLISH | 13/10/2026<br>02.30-04.30 |

**ಆ) ಕಲ್ಯಾಣ ಕರ್ನಾಟಕ ವ್ಯಾಪ್ತಿ**

| ಕ್ರ.ಸಂ. | ಪರೀಕ್ಷಾ ವಿವರ | ದಿನಾಂಕಗಳು ಮತ್ತು ಸಮಯ |
|---|---|---|
| 1 | PAPER. 1: GENERAL- FOR PST, PET Gr.2: | 14/10/2026<br>10.00-12.00 |
| 2 | PAPER 2: SUBJECT SPECIFIC: MATHEMATICS, EVS AND SOCIAL SCIENCE- FOR PST | 14/10/2026<br>02.30-04.30 |
| 3 | PAPER 2: SUBJECT SPECIFIC: PHYSICAL EDUCATION FOR PET Gr. 2 | 15/10/2026<br>10.00-12.00 |

| ಕ್ರ.ಸಂ. | ಪರೀಕ್ಷಾ ವಿವರ | ದಿನಾಂಕಗಳು ಮತ್ತು ಸಮಯ |
|---|---|---|
| 1 | PAPER. 1: GENERAL- FOR GPT, CST | 16/10/2026<br>10.00-12.00 |
| 2 | PAPER- 2: SUBJECT SPECIFIC- COMPUTER SCIENCE FOR CST | 16/10/2026<br>02.30-04.30 |
| 3 | PAPER- 2: SUBJECT SPECIFIC- SOCIAL SCIENCE - FOR SOCIAL SCIENCE | 17/10/2026<br>10.00-12.00 |

| | | |
|---|---|---|
| | PAPER-2: SUBJECT SPECIFIC: SCIENCE- FOR BIOLOGICAL SCIENCE | |
| 4 | PAPER- 2: SUBJECT SPECIFIC: MATHEMATICS- FOR MATHEMATICS AND SCIENCE | 17/10/2026<br>02.30-04.30 |
| 5 | PAPER- 2: SUBJECT SPECIFIC- KANNADA- FOR KANNADA LANGUAGE<br>PAPER- 2: SUBJECT SPECIFIC- ENGLISH- FOR ENGLISH LANGUAGE | 19/10/2026<br>10.00-12.00 |

| ಕ್ರ.ಸಂ. | ಪರೀಕ್ಷಾ ವಿವರ | ದಿನಾಂಕಗಳು ಮತ್ತು ಸಮಯ |
|---|---|---|
| 1 | PAPER. 1- GENERAL- FOR AM, PET Gr.1 | 21/10/2026<br>10.00-12.00 |
| 2 | PAPER 2: SUBJECT SPECIFIC: PHYSICAL EDUCATION: FOR PET Gr.1: | 21/10/2026<br>02.30-04.30 |
| 3 | PAPER 2: SUBJECT SPECIFIC- SCIENCE: FOR SCIENCE<br>PAPER 2: SUBJECT SPECIFIC- ARTS: FOR ARTS | 22/10/2026<br>10.00-12.00 |
| 4 | PAPER 2: SUBJECT SPECIFIC- KANNADA- FOR KANNADA<br>PAPER 2: SUBJECT SPECIFIC- FOR ENGLISH | 22/10/2026<br>02.30-04.30 |

10. **ಪರೀಕ್ಷಾ ಪ್ರವೇಶ ಪತ್ರ:** ಪರೀಕ್ಷಾ ಪ್ರವೇಶ ಪತ್ರವನ್ನು ಪರೀಕ್ಷೆ ಆರಂಭವಾಗುವುದಕ್ಕಿಂತ ಹತ್ತು ದಿನಗಳ ಮುಂಚೆ ವೆಬ್ ಸೈಟಿನಲ್ಲಿ ಲಭ್ಯ ಮಾಡಲಾಗುತ್ತದೆ. ಅಭ್ಯರ್ಥಿಗಳು ತಮ್ಮ ಯೂಸರ್ ಐಡಿ ಮತ್ತು ಪಾಸ್ ವರ್ಡನ್ನು ಬಳಸಿ ಮುದ್ರಿಸಿಕೊಳ್ಳಬೇಕು ಮತ್ತು ಇವುಗಳನ್ನು ಜೋಪಾನವಾಟ್ಟುಕೊಳ್ಳುವುದು ಅತ್ಯಾವಶ್ಯಕವಾಗಿದೆ. ಇದರಲ್ಲಿ ನೀಡಿರುವ ಸೂಚನೆಗಳನ್ನು ಓದಿ ಮನನ ಮಾಡಿಕೊಳ್ಳುವುದು. ಪರೀಕ್ಷಾ ಪ್ರವೇಶ ಪತ್ರವಾಗಲಿ, ಅಥವಾ ಯೂಸರ್ ಐಡಿ ಮತ್ತು ಪಾಸ್ ವರ್ಡನ್ನಾಗಲೀ ಇನೊಬ್ಬರ ಜೊತೆಗೆ ಹಂಚಿಕೊಳ್ಳಬಾರದು.
11. **ಪರೀಕ್ಷಾ ಕೇಂದ್ರ:** ಅಧಿಸೂಚನೆಗಳಲ್ಲಿ ತಿಳಿಸಿರುವಂತೆ ಅಭ್ಯರ್ಥಿಯು ಒಂದೇ ಜಿಲ್ಲೆಯಲ್ಲಿ ಎಲ್ಲಾ ಪರೀಕ್ಷೆಗಳನ್ನು ಬರೆಯಬಹುದಾಗಿದೆ. ಇದಕ್ಕಾಗಿ ಸೂಕ್ತವಾಗುವ ಜಿಲ್ಲೆಗಳನ್ನು ಅರ್ಜಿ ಸಲ್ಲಿಸುವಾಗಲೇ ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಆಸನಗಳ ಲಭ್ಯತೆಯ ಆಧಾರದಲ್ಲಿ ಪರೀಕ್ಷಾ ಕೇಂದ್ರಗಳನ್ನು ಹಂಚಿಕೆ ಮಾಡಲಾಗುತ್ತದೆ.
12. **ಪ್ರಶ್ನೆಪತ್ರಿಕೆಗಳು:** ಪ್ರತಿಯೊಬ್ಬ ಅಭ್ಯರ್ಥಿಯೂ ತಾನು ಸಲ್ಲಿಸಿರುವ ಅರ್ಜಿಯ ಪ್ರಕಾರ ಪತ್ರಿಕೆ 1 ಮತ್ತು ಪತ್ರಿಕೆ-2ನ್ನು ಕಡ್ಡಾಯವಾಗಿ ಉತ್ತರಿಸಬೇಕು. ಇವುಗಳಲ್ಲಿ ಯಾವುದನ್ನು ಉತ್ತರಿಸದಿದ್ದರೂ ಅಭ್ಯರ್ಥಿಯನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ. ಮೇಲೆ ತಿಳಿಸಿದಂತೆ ಪ್ರಶ್ನೆ ಪತ್ರಿಕೆಯನ್ನು ಆಂಗ್ಲ ಮತ್ತು ಕನ್ನಡ ಭಾಷೆಗಳಲ್ಲಿ ಮುದ್ರಿಸಿ ಒದಗಿಸಲಾಗುತ್ತದೆ. ಅವುಗಳನ್ನು ಓದಿ ಅರ್ಥೈಸಿಕೊಂಡು ಉತ್ತರವನ್ನು ನೀಡಿರುವ OMR ಶೀಟಿನಲ್ಲಿ ಕ್ರಮವತ್ತಾಗಿ ತುಂಬಿಸಬೇಕಾಗುತ್ತದೆ. ಪ್ರಶ್ನೆಪತ್ರಿಕೆ ಮತ್ತು OMR ಎರಡೂ ತಾಳೆಯಾಗುತ್ತವೆ ಎಂಬುದನ್ನು ಖಚಿತಪಡಿಸಿಕೊಂಡು ಉತ್ತರಿಸಲು ತೊಡಗಬೇಕು.
13. **ಓ.ಎಂ.ಆರ್ ಭರ್ತಿಗೊಳಿಸುವುದು: 1)** ಅಭ್ಯರ್ಥಿಗಳಿಗೆ ಅವರವರ ಹೆಸರು ಮತ್ತು ವಿವರಗಳಿರುವ OMR ಉತ್ತರ ಪತ್ರಿಕೆಗಳನ್ನು ಒದಗಿಸಲಾಗುತ್ತದೆ. ಅಭ್ಯರ್ಥಿಗಳು ಇದನ್ನು ಖಚಿತಪಡಿಸಿಕೊಂಡು ಓ.ಎಂ.ಆರ್ ಮತ್ತು ಉತ್ತರ ಪತ್ರಿಕೆಯಲ್ಲಿ ತುಂಬಬೇಕಾದ ಮಾಹಿತಿಗಳನ್ನು ಕಡ್ಡಾಯವಾಗಿ ಭರ್ತಿ ಮಾಡಬೇಕು ಹಾಗೂ ನಿಗದಿತ ಸ್ಥಳಗಳಲ್ಲಿ

ಅಭ್ಯರ್ಥಿಯ ಸಹಿ, ಹೆಬ್ಬೆಟ್ಟು ಗುರುತುಗಳನ್ನು ಹಾಕಬೇಕು. ಕೊಠಡಿ ಮೇಲ್ವಿಚಾರಕರು ಇವುಗಳನ್ನು ಖಚಿತಪಡಿಸಿಕೊಂಡು ಸಹಿ ಹಾಕಬೇಕು. ಇಲ್ಲದಿದ್ದಲ್ಲಿ ಅಂತಹ ಓ.ಎಂ.ಆರ್‌ಗಳನ್ನು ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ.

**2)** ಅಭ್ಯರ್ಥಿಗಳು OMR ಉತ್ತರ ಪತ್ರಿಕೆಯಲ್ಲಿ ಉತ್ತರಗಳನ್ನು ಕ್ರಮವತ್ತಾಗಿ ನೀಲಿ ಅಥವಾ ಕಪ್ಪು ಶಾಯಿಯ ಬಾಲ್ ಪಾಯಿಂಟ್ ಪೆನ್ನಿನಿಂದ ಕ್ರಮವತ್ತಾಗಿ ತುಂಬಿಸತಕ್ಕದ್ದು.

**3)** ಪ್ರಶ್ನೆ ಪತ್ರಿಕೆಯ ಪ್ರಶ್ನೆಯನುಸಾರ ನೀಡಿರುವ ನಾಲ್ಕು ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಗುರುತಿಸಿ ದಾಖಲಿಸಲು **OMR** ಹಾಳೆಯಲ್ಲಿ ಪ್ರತಿ ಪ್ರಶ್ನೆ ಸಂಖ್ಯೆಯ ಎದುರಿಗೆ ನಾಲ್ಕು ಖಾಲಿ ಅಂಡಾಕಾರಗಳನ್ನು ನೀಡಲಾಗುವುದು. ಇವುಗಳಲ್ಲಿ ಸೂಕ್ತವಾದುದನ್ನು ನೀಲಿ ಅಥವಾ ಕಪ್ಪು ಶಾಯಿಯಿಂದ ಕಡ್ಡಾಯವಾಗಿ ತುಂಬಿಸಬೇಕು. ಒಂದು ವೇಳೆ ಇವುಗಳಲ್ಲಿ ಯಾವುದನ್ನೂ ತುಂಬಿಸಲು ಬಯಸದೇ ಇದ್ದಲ್ಲಿ ಇದೇ ಸಾಲಿನಲ್ಲಿ ಇರುವ ಐದನೇ ಅಂಡಾಕಾರವನ್ನು ತಪ್ಪದೇ ಭರ್ತಿಗೊಳಿಸುವುದು. ಒಂದುವೇಳೆ ಇವುಗಳಲ್ಲಿ ಯಾವುದನ್ನೂ ಭರ್ತಿಗೊಳಿಸದೇ ಇದ್ದಲ್ಲಿ, ಇಂತಹ ಪ್ರತಿ ಪ್ರಶ್ನೆಗೂ 0.25 ಅಂಕಗಳನ್ನು ಅಭ್ಯರ್ಥಿಯು ಗಳಿಸುವ ಅಂಕಗಳಿಂದ ಕಡಿತಗೊಳಿಸಲಾಗುವುದು.

14. **ಕೀ ಉತ್ತರಗಳ ಪ್ರಕಟಣೆ:** ಪರೀಕ್ಷೆಗಳು ಮುಗಿದ ನಂತರ ಉತ್ತರಗಳನ್ನು ವೆಬ್ ಸೈಟಿನಲ್ಲಿ ಪ್ರಕಟಿಸಲಾಗುತ್ತದೆ. ಇದಕ್ಕೆ ಆಕ್ಷೇಪ ಸಲ್ಲಿಸಲು ಮೂರು ದಿನಗಳ ಕಾಲಾವಕಾಶವನ್ನು ನೀಡಲಾಗುತ್ತದೆ. ಆಕ್ಷೇಪಣೆಗಳನ್ನು ತಜ್ಞರ ಸಮಿತಿಯಿಂದ ಪರಿಶೀಲಿಸಿ ಅಂತಿಮ ಉತ್ತರಗಳನ್ನು ವೆಬ್ ಸೈಟಿನಲ್ಲಿ ಪ್ರಕಟಿಸಲಾಗುತ್ತದೆ ಹಾಗೂ ಅಂಕಗಳನ್ನು ಪ್ರಕಟಿಸಲಾಗುತ್ತದೆ.
15. **OMR ಉತ್ತರ ಪತ್ರಿಕೆಗಳ ಸ್ಕ್ಯಾನಿಂಗ್ ಮತ್ತು ಅಂಕಗಳ ಪ್ರಕಟಣೆ:** ಪರೀಕ್ಷೆ ಮುಗಿದ ನಂತರದಲ್ಲಿ OMR ಉತ್ತರ ಪತ್ರಿಕೆಗಳನ್ನು ತಜ್ಞರಿಂದ ಸ್ಕ್ಯಾನಿಂಗ್ ಮಾಡಿಸಿ ಪಡೆದ ಅಂಕಗಳನ್ನು ವೆಬ್ ಸೈಟಿನಲ್ಲಿ ಪ್ರಕಟಿಸಲಾಗುತ್ತದೆ. ಅಭ್ಯರ್ಥಿಗಳು ಅವರ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಬಳಸಿ ಅಂಕಗಳನ್ನು ಪರಿಶೀಲಿಸಬಹುದಾಗಿದೆ. ಮರು ಮೌಲ್ಯಮಾಪನಕ್ಕೆ ಅವಕಾಶ ಇರುವುದಿಲ್ಲ.
16. **ಆಯ್ಕೆ ಪಟ್ಟಿ ಪ್ರಕಟಣೆ:** ಸಂಬಂಧಿಸಿದ ಆಯ್ಕೆ ಪ್ರಾಧಿಕಾರವು ಆಯ್ಕೆ ಪಟ್ಟಿಯನ್ನು ಇಲಾಖಾ ವೆಬ್ ಸೈಟಿನಲ್ಲಿ ಪ್ರಕಟಿಸುವುದು.
17. **ನೇಮಕಾತಿ ಆದೇಶ ನೀಡುವುದು:** ನೇಮಕಾತಿ ಪ್ರಾಧಿಕಾರವು ಚಾಲ್ತಿ ನಿಯಮಗಳಂತೆ ಪ್ರಕಟಿತ ಹುದ್ದೆಗಳಿಗೆ ತಕ್ಕಂತೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ, ದಾಖಲೆಗಳ ಪರಿಶೀಲನೆ ನಡೆಸಿ, ನೇಮಕಾತಿ ಆದೇಶವನ್ನು ನೀಡುವುದು.
18. **ಸಹಾಯವಾಣಿ:** ಈ ಪ್ರಕ್ರಿಯೆಯಲ್ಲಿ ಅಭ್ಯರ್ಥಿಗಳಿಗೆ ಸಹಾಯ ಮಾಡಲು ಕೇಂದ್ರೀಕೃತ ದಾಖಲಾತಿ ಘಟಕದಲ್ಲಿ ಸಹಾಯವಾಣಿಯನ್ನು ಸ್ಥಾಪಿಸಿದ್ದು ಅದು ಈ ಕೆಳಗಿನಂತಿದೆ. ಅಗತ್ಯವಿದ್ದಲ್ಲಿ ಪೂ. ೮.೦೦ರಿಂದ ಅಪರಾಹ್ನ ೮.೦೦ರ ತನಕ ಅದನ್ನು ಬಳಸಿಕೊಳ್ಳಲು ಕೋರಿದೆ.

**080- 22483145/ 22483140, 9483024723**

ಸಹಿ/-

ಸಹನಿರ್ದೇಶಕರು

ಕೇಂದ್ರೀಕೃತ ದಾಖಲಾತಿ ಘಟಕ

ಶಾಲಾ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ಬೆಂಗಳೂರು